

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119



Volume : 06 | Issue : 239 | Friday 31-05-2024 | E-mail : maruti.b.hosamani76@gmail.com | Page: 4 | Price : Rs. 1/-


## ಶಾಲಾ ಪ್ರಾರಂಭೋತ್ಸವ–ಮಕ್ಕಳಿಗೆ ಸಂಭ್ರಮದ ಸ್ವಾಗತ

**ತಾಯಕನಹಳ್ಳಿ :** ಕೂಡ್ಲಿಗಿ ತಾಲೂಕಿನ ಹೂಡೇಂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಾಯಕನಹಳ್ಳಿ ಶ್ರೀ ಗುರು ಕನಕ ವಿದ್ಯಾಕೇಂದ್ರಶಾಲೆಯಲ್ಲಿ ಮೇ 29 ಇಂದು ಶಾಲಾ ಪ್ರಾರಂಭೋತ್ಸವ ಅಂಗವಾಗಿ ಶಾಲೆಯನ್ನು ತಳಿರು ತೋರಣಗಳಿಂದ ಶೃಂಗರಿಸಿ, ಮಕ್ಕಳನ್ನು ಪ್ರೀತಿಯಿಂದ ಹೂ ಗುಚ್ಚವನ್ನು ನೀಡುವ ಮೂಲಕ ಅದ್ದೂರಿಯಾಗಿ ಸ್ವಾಗತಿಸಿ ಜತೆಗೆ ಸಿಹಿ ತಿಂಡಿ ವಿತರಿಸಿ ಶಾಲೆಗೆ ಬರಮಾಡಿ ಕೊಳ್ಳಲಾಯಿತು. ನಲವತ್ತೆಂಟು ದಿನಗಳ ಬೇಸಗೆಯ ರಜೆ ಮುಗಿದಿದೆ. ಇಷ್ಟು ದಿನ ಆಟ–ತುಂಟಾಟಗಳಿಂದ ಹೆತ್ತವರನ್ನು



ಸುಸ್ತಾಗಿಸಿದ್ದ ಚಿಣ್ಣರು ಇಂದು ಬುಧವಾರ ಹೆಗಲಿಗೆ ಪಾಟಿ ಚೀಲ ಜೋತು ಹಾಕಿಕೊಂಡು, ಭಾರವಾದ ಹೆಜ್ಜೆಗಳೊಂದಿಗೆ ಶಾಲೆಗಳತ್ತ ತೆರಳಿದರು. ಶಾಲಾ ಆರಂಭದ ದಿನವನ್ನು ಹಬ್ಬದ ರೀತಿಯಲ್ಲಿ ಆಚರಿಸಲು ಶಿಕ್ಷಣ ಇಲಾಖೆ ಹಾಗೂ ಆಯಾ ಶಾಲೆಗಳಅಭಿವೃದ್ಧಿಸಮಿತಿಯಿಂದ ಸಿದ್ಧತೆಗಳನ್ನು ಮಾಡಿ ಕೊಳ್ಳಲಾಗಿತ್ತು. ಈ ವೇಳೆ ಶಾರದಾ ದೇವಿಯ ಪೂಜೆ ಮಾಡಿ ಕೃಪೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ಮುಖ್ಯಶಿಕ್ಷಕಿಸುನೀತಗುರುರಾಜ್, ಕಾರ್ಯದರ್ಶಿ ಬಿ ಟಿ ಮಂಜಣ್ಣ, ಸಹ ಶಿಕ್ಷಕರಾದ ಹಂಪಮ್ಮ ಪೂಜಾರ್, ಮಂಜುಳ ಎಂ, ಸಿ ಆರ್ ಸುಮಿತ್ರ, ಪ್ರಭಾಕರ್ ಎಂ, ರುದ್ರಮ್ಮ ಸಿ, ಬಸವರಾಜ್ ಜೆ. ಪಿ, ಕುಬೇರ ಎಂ ಜೆ , ಸರೋಜಾ ಆರ್, ಹಾಗೂ ಹೂಡೇಂ ಗ್ರಾಮ ಪಂಚಾಯಿತಿ ಅರಿವು ಕೇಂದ್ರ ಗ್ರಂಥಾಲಯ ಗ್ರಂಥಪಾಲಕರಾದ ತುಡುಮ ಗುರುರಾಜ್ ಹಾಗೂ ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗಿಯಾಗಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್. ವೀರೇಶ್. ಕಾನಾ ಹೊಸಹಳ್ಳಿ**

## ಕೂಡ್ಲಿಗಿ ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬೀಜ ವಿತರಣೆ

**ಕೂಡ್ಲಿಗಿ :** ಈ ಬಾರಿ ಮಳೆಯೂ ವಾಡಿಕೆಗಿಂತ ಹೆಚ್ಚು ಬೇಗ ಮಳೆ ಬಂದಿದ್ದು ಇಡೀ ತಾಲೂಕಿನಲ್ಲಿ ಕೃಷಿ ಚಟುವಟಿಕೆ ಭರದಿಂದ ಸಾಗಿದೆ ಈ ಬಾರಿ ಮಳೆ ಚೆನ್ನಾಗಿ ಆಗಿರುವುದರಿಂದ ರೈತ ಸಂಪರ್ಕ ಕೇಂದ್ರಕ್ಕೆ ರೈತರು ಬೀಜಗಳನ್ನು ಕೊಂಡು ಕೊಳ್ಳಲು ಮುಂದೆ ಬಂದಿದ್ದಾರೆ.

ಅನೇಕ ಬೀಜಗಳು ದಾಸ್ತಾನಿದ್ದು ಮೆಕ್ಕೆಜೋಳ 90 ಕ್ವಿಂಟಲ್ ತೊಗರಿ 31 ಕ್ವಿಂಟಲ್ ಜೋಳ 9 ಕ್ವಿಂಟಲ್

ಸಜ್ಜೆ 2 ಕ್ವಿಂಟಲ್ ಮತ್ತು ಹೆಸರು ನವಣೆ ಇತ್ಯಾದಿ ಶೇಖರಣೆ ರೈತ ಸಂಪರ್ಕ ಕೇಂದ್ರದಲ್ಲಿ ಮಾಡಲಾಗಿದೆ ರೈತ ಸಂಪರ್ಕ ಕೇಂದ್ರದಲ್ಲಿ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ 50% ರಿಯಾಯಿತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರಿಗೆ ಶೇಕಡ 75 ರಷ್ಟು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಒದಗಿಸಲಾಗುವುದು. ಎಂದು ಅಧಿಕಾರಿಗಳು ತಿಳಿಸಿದರು.

ಈ ಬೀಜ ವಿತರಣಾ ಸಂದರ್ಭದಲ್ಲಿ ಸಹಾಯಕ ಕೃಷಿ ನಿರ್ದೇಶಕರು ಸುನಿಲ್ ಕುಮಾರ್, ಸಾವಿತ್ರಿ ಹರಾಳ್ ಕೃಷಿ ಅಧಿಕಾರಿಗಳು,ಗುರುಬಸವರಾಜ್, ಆತ್ಮ ಯೋಜನೆಯ ವ್ಯವಸ್ಥಾಪಕರಾದ ಶ್ರವಣಕುಮಾರ, ಕೃಷಿಕ ಸಮಾಜದ ನಿರ್ದೇಶಕರಾದ ಎಮ್.ಬಸವರಾಜ್ ಕಕ್ಕುಪ್ಪಿ ಕೃಷಿಕ ಸಮಾಜದ ಉಪಾಧ್ಯಕ್ಷರಾದ ಜಂಬಣ್ಣ ರೈತ ಸಂಘದ ದೇವರಮನಿ ಮಹೇಶ್ ತಾಲೂಕ



ಅಧ್ಯಕ್ಷರಾದ ಭಾಷಾ ಸಾಹೇಬ್ ಶಿವಪುರ ಹಾಲಸ್ವಾಮಿ ರೈತ ಸಂಘದ ಪಾಂಡುರಂಗ ನಾಯಕ್ ದುರ್ಗಪ್ಪ ನಾರಾಯಣ ನಾಯ್ಕ ಪರುಶುರಾಮ್ ನಾಯ್ಕ ಶೇಷಾಪ್ಪ ಮುಂತಾದವರು ಭಾಗವಹಿಸಿದ್ದರು.

ಮತ್ತು ಕೂಡ್ಲಿಗಿ ರೈತ ಸಂಪರ್ಕ ಕೇಂದ್ರದಲ್ಲಿ ಈಗಿರುವ ದಾಸ್ತಾನು ರಿಯಾಯಿತಿ ದರದಲ್ಲಿ ಬಾರ್ ಕೋಡ್ ಸ್ಕ್ಯಾನರ್ ಮುಖಾಂತರ ಅಗತ್ಯ ದಾಖಲಾತಿಗಳನ್ನೊದಗಿಸಿ ರೈತರು ಬಿತ್ತನೆ ಬೀಜಗಳನ್ನು ಪಡೆಯಲು ಸಾರ್ವಜನಿಕರು ರೈತರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ. ನ್ಯೂಸ್ ಕನ್ನಡ ಚಾನಲ್ : ಕೆ.ಎಸ್.ವೀರೇಶ್. ಕಾನಾ ಹೊಸಹಳ್ಳಿ**

## ಶಿಕ್ಷಣ, ಉದ್ಯೋಗಕ್ಕಾಗಿ ಕೂಡ್ಲಿಗಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಕಾಂಗ್ರೆಸ್ ಅಭ್ಯರ್ಥಿ ಡಾ. ಚಂದ್ರಶೇಖರ ಜಿ. ಪಾಟೀಲ ಅವರ ಗೆಲುವುಗಾಗಿ ಶ್ರಮಿಸಬೇಕೆಂದ: ಶಾಸಕ ಡಾ. ಶ್ರೀನಿವಾಸ್.ಎನ್.ಟಿ.

**ಕೂಡ್ಲಿಗಿ :** ವಿಧಾನ ಸಭಾ ಕ್ಷೇತ್ರದ ಶಾಸಕರ ಕಛೇರಿ ಮುಂಭಾಗದಲ್ಲಿ ಆಯೋಜಿಸಿದ್ದ "ಕರ್ನಾಟಕ ರಾಜ್ಯ ವಿಧಾನ ಪರಿಷತ್ ಚುನಾವಣೆ – 2024" ಅಂಗವಾಗಿ ಮಾನ್ಯ ಶಾಸಕರಾದ ಡಾ. ಶ್ರೀನಿವಾಸ್ ಎನ್. ಟಿ. ಅವರ ಅಧ್ಯಕ್ಷತೆಯಲ್ಲಿ ವಿವಿಧ ಪದಾಧಿಕಾರಿಗಳು ಮತ್ತು ಮುಖಂಡರ ಸಮ್ಮುಖದಲ್ಲಿ ಸಭೆ ನಡೆಸಿದರು. ನಮ್ಮ ಕೂಡ್ಲಿಗಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು "ಶಿಕ್ಷಣ ಮತ್ತು ಉದ್ಯೋಗ" ಕ್ಕಾಗಿ ಕಾಂಗ್ರೆಸ್ ಪಕ್ಷದ ಈಶಾನ್ಯ ಪದವೀಧರ ಕ್ಷೇತ್ರದ ಅಭ್ಯರ್ಥಿಯಾದ ಡಾ. ಚಂದ್ರಶೇಖರ ಬಿ. ಪಾಟೀಲ ಅವರ ಗೆಲುವುಗಾಗಿ ಶ್ರಮಿಸಬೇಕು. ಸಾಮಾಜಿಕ ಸುಧಾರಣೆ ತರುವ ನಿಟ್ಟಿನಲ್ಲಿ ಸಹಕಾರ ಕೊಡಬೇಕು ಎಂದರು. ಮುಖಂಡರ ಹಿರಿತನ, ಅನುಭವ ಮತ್ತು ಯುವಕರ ಚೈತನ್ಯ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ತಳ ಮಟ್ಟದಲ್ಲಿ ಒಂದು ಶಕ್ತಿ ಎಂದೂ ಶಾಸಕರು ಹೇಳಿದರು.

ನಮ್ಮ ಕ್ಷೇತ್ರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕೊರತೆಗಳಿವೆ. ವಸತಿ ಶಾಲೆಗಳು ಹಾಗೂ ಪದವೀಧರರ ನಿರುದ್ಯೋಗದ ಸಮಸ್ಯೆಗಳನ್ನು ಬಗೆ ಹರಿಸಲು ಹಿರಿಯ ಮುತ್ಸದ್ದಿ ರಾಜಕಾರಣಿಯಾದ ಡಾ. ಚಂದ್ರಶೇಖರ ಬಿ ಪಾಟೀಲ ಅವರ ಗೆಲುವುಗಾಗಿ ಕೈ ಜೋಡಿಸಬೇಕು ಎಂದೂ ತಿಳಿಸಿದರು. ಈ ಸಂದರ್ಭದಲ್ಲಿ ಕೂಡ್ಲಿಗಿ ಬ್ಲಾಕ್ ಅಧ್ಯಕ್ಷರಾದ ಶ್ರೀ ಗುರುಸಿದ್ದನಗೌಡ , ಕೆಪಿಸಿಸಿ ಕಾಂಗ್ರೆಸ್ ಸದಸ್ಯರಾದ ಉಮೇಶ, ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರಾದ ಶ್ರೀ ಎಸ್ ವೆಂಕಟೇಶ , ಮಾಜಿ ತಾಲೂಕು ಪಂಚಾಯತಿ ಸದಸ್ಯರಾದ ಕಲ್ಲಹಳ್ಳಿ ಸಿದ್ದಣ್ಣ, ಶೇಖರಪ್ಪ ಹಾರಕಭಾವಿ, ಕುರಿಹಟ್ಟಿ ಬೋಸಯ್ಯ, ಹೂಡೇಂ ಜಿ. ಪಾಪನಾಯಕ, ಮುಖಂಡರಾದ ಮಲ್ಲಿಕಾರ್ಜುನ, ಬುಡ್ಡಾ ರೆಡ್ಡಿ, ತಮ್ಮಣ್ಣ ಎನ್.ವಿ, ಶಿವಪುರ ರಾಜಣ್ಣ, ಪೂಜಾರಹಳ್ಳಿ ಗ್ರಾ. ಪಂ ಅಧ್ಯಕ್ಷರಾದ ವೆಂಕಟೇಶ, ದಿನ್ನೇ ಮಲ್ಲಿಕಾರ್ಜುನ, ಹಾಲಸಾಗರ ಮಾರೇಶ, ಕಾಂಗ್ರೆಸ್ ಮುಖಂಡರು ಸೇರಿದಂತೆ ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್.ವೀರೇಶ್. ಕಾನಾ ಹೊಸಹಳ್ಳಿ**

## ತಂಬಾಕು ರಹಿತ ಗ್ರಾಮವಾಗಿ ನಿರ್ಮಾಣ ಮಾಡಬೇಕು

**ಕೋರವಾರ :** ದೇವರ ಹಿಪ್ಪರಗಿ ತಾಲೂಕಿನ ಕೋರವಾರ ಗ್ರಾಮದಲ್ಲಿ ವಿಶ್ವ ತಂಬಾಕು ರಹಿತ ಗ್ರಾಮದಲ್ಲಿ ವಿವಿಧ ಪಾನಶಾಪ್ ಕಿರಾಣಿ ಅಂಗಡಿಗಳ ಮೇಲೆ ದಾಳಿ ಹಮ್ಮಿಕೊಂಡು ಜನ ಜಾಗೃತಿ ಮೂಡಿಸುವ ಕುರಿತು, ಈ ಕಾರ್ಯಚರಣೆಯಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಾದ ಜಿ,ವ್ಹಿ ,ಪಟ್ಟಣಶೆಟ್ಟಿ, ಮತ್ತು ಹಿರಿಯ ಆರೋಗ್ಯ ನೀರಿಕ್ಷಣಾಧಿಕಾರಿ ಮಲ್ಲನಗೌಡ ಸಾಲವಾಡಗಿ ಬಸವರಾಜ ಬಡಿಗೇರ, ಪ್ರಯೋಗ ಶಾಲಾ ತಂತ್ರಜ್ಞಾನ ಅಧಿಕಾರಿ, ಹಾಗೂ ಜಯ ಕರ್ನಾಟಕ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಚನ್ನಪ್ಪಗೌಡ ಎಸ್,



ಬಿರಾದಾರ, ಮತ್ತು ಶ್ರೀಶೈಲ ಬೊಮ್ಮನಜೋಗಿ, ದ್ವಿತೀಯ ದರ್ಜೆ ಸಹಾಕರು, ಕಂಟೆಪ್ಪ ಮೋರಟಗಿ , ಗ್ರುಪ್ ಡಿ, ಮತ್ತು ಬಿ,ಆಯ್, ಟಕ್ಕಳಕಿ, ಗ್ರಾ.ಪಂ.ಸಿಬ್ಬಂದಿ, ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ ಹಚ್ಯಾಳ ದೇವರ ಹಿಪ್ಪರಗಿ**

## ಶ್ರೀ ದುರ್ಗಾಮಾತೆ ರಕ್ಷಣಾತ್ಮಕ ಮಾತೃ ದೇವತೆ: ತಹಶಿಲ್ದಾರ ಕೀರ್ತಿ

**ತಾಳಿಕೋಟೆ :** ಶ್ರೀ ದುರ್ಗಾ ದೇವತೆಯು ರಕ್ಷಣಾತ್ಮಕ ಮಾತೃ ದೇವತೆಯಾಗಿದ್ದು ಉಗ್ರ ರೂಪವಾಗಿದ್ದು ತುಳಿತಕ್ಕೊಳಗಾದವರ ವಿಮೋಚನೆಗಾಗಿ ದುಷ್ಟರವಿರೂದ್ದ ತನ್ನ ದೈವಿಕ ಕೋಪವನ್ನು ಬಿಚ್ಚಿಡುತ್ತಾಳೆ ಮತ್ತು ಸೃಷ್ಠಿಯನ್ನು ಸಶಕ್ತಗೊಳಿಸಲು ವಿನಾಷವನ್ನುಂಟು ಮಾಡುತ್ತಾಳೆಂದು ತಾಲೂಕಾ ತಹಶಿಲ್ದಾರರಾದ ಶ್ರೀಮತಿ ಕೀರ್ತಿ ಚಾಲಕ ಅವರು ಹೇಳಿದರು.

ಸ್ಥಳೀಯ ಹರಳಯ್ಯ ಸಮಾಜ ಬಾಂದವರ ವತಿಯಿಂದ ಏರ್ಪಡಿಸಲಾದ ಶ್ರೀ ದುರ್ಗಾದೇವಿ ಜಾತ್ರೋತ್ಸವದಲ್ಲಿ ಸಮಾಜ ಬಾಂದವರ ವತಿಯಿಂದ ಸನ್ಮಾನ ಸ್ವಿಕರಿಸಿ ಮಾತನಾಡುತ್ತಿದ್ದ ಅವರು ದುರ್ಗಾದೇವಿಯು ಅತ್ಯಂತ ಪ್ರಸಿದ್ದ ಅವತಾರ ಮತ್ತು ಹಿಂದೂ ದೇವತಾ ಸಂಗ್ರಹದಲ್ಲಿ ಶಕ್ತಿ ದೇವತೆಯ ಮುಖ್ಯ ರೂಪಗಳ ಪೈಕಿ ಈ ಒಬ್ಬ ದೇವತೆಯಾಗಿದ್ದಾಳೆಂದರು. ಅಂತಹ ದೇವತೆಯ ಜಾತ್ರೋತ್ಸವವನ್ನು ಪ್ರತಿವರ್ಷ ಹರಳಯ್ಯ ಸಮಾಜ ಬಾಂದವರು ಆಚರಿಸಿಕೊಂಡು ಬರುತ್ತಿರುವದು ಸಂತಸದ ಸಂಗತಿಯಾಗಿದೆ ಎಂದ ಅವರು ಭಕ್ತಿ ಭಾವದಿಂದ ಈ ದೇವತೆಗೆ ನಡೆದುಕೊಂಡವರಿಗೆ ಯಾವುದೂ ಕಡಿಮೆಯಾಗಲಾರದು ಕಾರಣ ಎಲ್ಲರೂ ತಮ್ಮ ಮಕ್ಕಳಿಗೆ ಈ ದೇವತೆಯ ಭಕ್ತಿ ಮಾರ್ಗವನ್ನು ತೋರಿ ಸಮಾಜದ ಎಲ್ಲ ಮಕ್ಕಳಿಗೆ ಶಿಕ್ಷಣವಂತರನ್ನಾಗಿ ರೂಪಿಸುವ ಕಾರ್ಯ ಮಾಡಲು ಮುಂದಾಗಬೇಕೆಂದು





ಹೇಳಿದ ತಹಶಿಲ್ದಾರ ಕೀರ್ತಿ ಚಾಲಕ ಅವರು ಶಿಕ್ಷಣ ಒಂದರಿಂದಲೇ ಬೇಕಾದುದ್ದನ್ನು ಸಾದಿಸಬಹುದಾಗಿದೆ ಎಂದು ಶ್ರೀ ದೇವಿಯ ಮಹಾತ್ಮೆ ಕುರಿತು ವಿವರಿಸಿದರು.

ಇನ್ನೋರ್ವ ಅತಿಥಿ ಹಿರಿಯ ಪತ್ರಕರ್ತ ಜಿ.ಟಿ.ಘೋರ್ಪಡೆ ಅವರು ಸನ್ಮಾನ ಸ್ವಿಕರಿಸಿ ಮಾತನಾಡುತ್ತಾ ಹರಳಯ್ಯ ಸಮಾಜದ ಪರಿಚಯ ನನಗೇನು ಹೊಸದೇನಲ್ಲಾ ಈ ಸಮಾಜದ ಹಿರಿಯ ದಿ.ವಿಜಾಪೂರ ಶಿಕ್ಷಕರವರು ನನಗೆ 4ನೇ ತರಗತಿಯಲ್ಲಿ ಓದಿಸಿದ್ದು ಸರ್ಕಾರಿ ಶಾಲಾ ಶಿಕ್ಷಕರಾಗಿದ್ದ ಅವರು ಹೊಡೆ ಬಡಿ ಮಾಡಿ ಶಿಕ್ಷಣಕ್ಕೆ ಒತ್ತು ನೀಡಿದ್ದೇ ಇಂದು ನಾನು ಮೇಲ್ಮಟ್ಟಕ್ಕೇರಲು ಕಾರಣವಾಗಿದೆ ಎಂದರು. ಹರಳಯ್ಯ ಸಮಾಜ ಬಾಂದವರು ಸಮಾಜಕ್ಕಾಗಿ ಶ್ರಮಿಸುತ್ತಿರುವ ಯುವ ಸಂಘಟಕರಿಗೆ ಹಾಗೂ ಹಿತೈಷಿಗಳಿಗೆ ಪ್ರೋತ್ಸಾಹಿಸುವ ಕಾರ್ಯ ಮಾಡಿ ಅವರನ್ನು ಮೇಲ್ಮಟ್ಟಕ್ಕೇತ್ತುವ ಕಾರ್ಯ ಮಾಡುತ್ತಾ ಸಾಗಿದರೆ ಸಮಾಜದ ಏಳಿಗೆಯಾಗಲು ಸಾದ್ಯ ನಾ ಮುಂದೆ ನೀ ಮುಂದೆ ಎಂಬ ಭಾವನೆ ಬೇಡಾ ಎಲ್ಲರೂ ಸೌಮ್ಯ ಸ್ವರೂಪದಿಂದ ಸಾಗಿಬಂದ ಈ ಸಮಾಜದ ಬಗ್ಗೆ ನನಗೂ ಸಹ ಕಳಕಳಿ ಇದೆ ಸಮಾಜದ ಹಿತದೃಷ್ಠಿಗಾಗಿ ಹೋರಾಟವಾಗಲಿ ಯಾವುದೇ ತರಹದ ಸೇವಾ ಕಾರ್ಯಕ್ಕಾಗಲಿ ನನಗೆ ಅಹ್ವಾನಿಸಿದರೆ ಸಾಕು 24 ಗಂಟೆಗಳ ಕಾಲಾವಧಿಯಲ್ಲಿಯೂ ಸಮಾಜ ಸೇವಾ ಕಾರ್ಯದಲ್ಲಿ ನಾನುಕೂಡಾ ಬಾಗಿಯಾಗಲು ಸಿದ್ದನಿದ್ದೇನೆಂದ ಘೋರ್ಪಡೆ ಅವರು ಶ್ರೀ ದೇವಿಯ ಶಕ್ತಿಯಿಂದಲೇ ದೇಶ ಉಳಿದಿದೆ ಅಂತಹ ಶಕ್ತಿಯ ದೇವತೆಯಾದ ಶ್ರೀ ದುರ್ಗಾ ಪರಮೇಶ್ವರಿಯ ಸೇವಾ ಕಾರ್ಯ ಮಾಡುತ್ತಾ ಜಾತ್ರೋತ್ಸವವನ್ನು ಆಚರಿಸುತ್ತಾ ಸಾಗಿರುವದು ಹರ್ಷತಂದಿದೆ ಇಂತಹ ಕಾರ್ಯಕ್ಕೆ ಇನ್ನೂ ಹೆಚ್ಚಿಗೆ ಪ್ರೋತ್ಸಾಹಿಸುವ ಕಾರ್ಯ ಎಲ್ಲರೂ ಮಾಡಬೇಕೆಂದರು.

ಕಾರ್ಯಕ್ರಮದ ಮೊದಲಿಗೆ ಸುಮಂಗಲೆಯರ ಕುಂಭಮೇಳ, ಫಲ್ಲಕ್ಕಿ ಉತ್ಸವದೊಂದಿಗೆ ಶ್ರೀ ದುರ್ಗಾದೇವಿ ಮಹಾ ಮೂರ್ತಿಯ ರಥೋತ್ಸವದ ಭವ್ಯ ಮೇರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಾಗಿ ಶ್ರೀ ದೇವತೆಯ ಮಂದಿರ ತಲುಪಿತು. ನಂತರ ಸುಮಂಗಲೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಸಮಸ್ತ ಭಕ್ತಾದಿಗಳಿಗೆ ಮಹಾ ಪ್ರಸಾದ ವಿತರಿಸಲಾಯಿತು.

ಈ ಸಮಯದಲ್ಲಿ ರಾಜಶೇಖರ ವಿಜಾಪೂರ, ರಾಘವೇಂದ್ರ ವಿಜಾಪೂರ, ಪರಶುರಾಮ ವಿಜಾಪೂರ, ಆನಂದ ವಿಜಾಪೂರ, ಪರಶುರಾಮ ಇಲಕಲ್ಲ, ಕೃಷ್ಣಾ ಮಂಬ್ರುಮಕರ, ಚಿಂತಾಮಣಿ ವಿಜಾಪೂರ, ಗೋಪಾಲ ವಿಜಾಪೂರ, ರವಿ ಇಲಕಲ್ಲ, ಕಾಶಿನಾಥ ಮಬ್ರುಮಕರ, ಮಹಾಂತೇಶ ಇಲಕಲ್ಲ, ಶೇಖಪ್ಪ ವಿಜಾಪೂರ, ಮೊದಲಾದವರು ಇದ್ದರು.

## ಸೈಲೆಂಟ್ ಕಿಲ್ಲರ್ ಆಗಿ ಕಾಡುತ್ತಿದೆ ಅಧಿಕ ರಕ್ತದೊತ್ತಡ




**ಬಾಗಲಕೋಟೆ :** ಬಿ.ವಿ.ವಿ.ಎಸ್ ಸಂಘದ ಶ್ರೀ ಬಿ.ವಿ.ವಿ.ಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಮೆಡಿಕಲ್ ಸರ್ಜಿಕಲ್ ನರ್ಸಿಂಗ್ ವಿಭಾಗದ ವತಿಯಿಂದ ದಿನಾಂಕ: 17/05/2024 ರಂದು ವಿಶ್ವ ಅಧಿಕ ರಕ್ತದೊತ್ತಡ ದಿನವನ್ನು ಆಚರಿಸಲಾಯಿತು. ಅಧಿಕ ರಕ್ತದೊತ್ತಡವು ಹೃದಯ ರಕ್ತನಾಳದ ಕಾಯಿಲೆಗಳು ಮತ್ತು ಪಾರ್ಶ್ವವಾಯುಗಳಿಗೆ ಪ್ರಮುಖ ಅಪಾಯಕಾರಿ ಅಂಶವಾಗಿದೆ. ಭಾರತದಲ್ಲಿ 15 ಮತ್ತು 49 ರ ನಡುವಿನ ವಯಸ್ಸಿನ ವ್ಯಕ್ತಿಗಳಲ್ಲಿ 11.3% ಪತ್ತೆಯಾಗಿದ್ದು, ಅನಿಯಂತ್ರಿತ ರಕ್ತದೊತ್ತಡ ವಾರ್ಷಿಕವಾಗಿ ಹತ್ತು ದಶಲಕ್ಷಕ್ಕೂ ಹೆಚ್ಚು ಸಾವುಗಳಿಗೆ ಕಾರಣವಾಗುತ್ತದೆ.

ಈ ಕಾರ್ಯಕ್ರಮವು ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ.ಜಯಶ್ರೀ ಇಟ್ಟಿಯವರ ಮಾರ್ಗದರ್ಶನದಲ್ಲಿ ಜಿ.ಎನ್.ಎಮ್ ಹಾಗೂ ಬಿ.ಎಸ್ಸಿ ತೃತೀಯ ವರ್ಷದ ವಿದ್ಯಾರ್ಥಿಗಳು ಅಧಿಕ ರಕ್ತದೊತ್ತಡಕ್ಕೆ ಕಾರಣವಾಗುವ ಅಂಶಗಳು, ದುಷ್ಪರಿಣಾಮಗಳು ಹಾಗೂ ತಡೆಗಟ್ಟುವ ಕ್ರಮಗಳ ಬಗ್ಗೆ ಜಾಗೃತಿ ಪಥಸಂಚಲನ ಮತ್ತು ಕಿರು ನಾಟಕವನ್ನು ನಗರದ ಕೌಲ್‌ಪೇಟನಲ್ಲಿ ಪ್ರದರ್ಶಿಸಿದರು.

ಎಮ್.ಎಸ್.ಎನ್ ವಿಭಾಗದ ಉಪನ್ಯಾಸಕಿಯಾದ ಕುಮಾರಿ ದೀಪಿಕಾ ದಾಸರ ಅವರು ರಕ್ತದೊತ್ತಡಕ್ಕೆ ಕಾರಣವಾಗುವ ಅಂಶಗಳು, ಸರಿಯಾದ ಆರೋಗ್ಯ ತಪಾಸಣೆ, ಒತ್ತಡ ನಿವಾರಣೆ ಉತ್ತಮ ಜೀವನ ಶೈಲಿಯ ಅಳವಡಿಕೆ ಬಗ್ಗೆ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಶ್ರೀಮತಿ ಬೋರಮ್ಮಾ ಸನಗೇರಿ ಹಾಗೂ ಮಹೇಶ ವಾಂಗಿ ಆರೋಗ್ಯ ಶಿಕ್ಷಣವನ್ನು ಜನರಿಗೆ ನೀಡಿದರು.

## ಈಶಾನ್ಯ ಪದವಿಧರ ಕ್ಷೇತ್ರದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಗೆಲುವು: ಜ್ಯೋತಿ

**ಕೊಪ್ಪಳ :** ಕರ್ನಾಟಕ ವಿಧಾನ ಪರಿಷತ್ತಿಗೆ ಈಶಾನ್ಯ ಪದವಿಧರ ಕ್ಷೇತ್ರಕ್ಕೆ ನಡೆಯುತ್ತಿರುವ ಚುನಾವಣೆಯಲ್ಲಿ ಹಾಲಿ ಪರಿಷತ್ ಸದಸ್ಯ ಚಂದ್ರಶೇಖರ್ ಪಾಟೀಲ್ (ಚಂಪಾ) ಅವರು ಮತ್ತೊಮ್ಮೆ ಗೆಲ್ಲುವದು ಗ್ಯಾರಂಟಿ ಎಂದು ಕಾಂಗ್ರೆಸ್ ಮುಖಂಡೆ ಜ್ಯೋತಿ ಎಂ. ಗೊಂಡಬಾಳ ಹೇಳಿದರು.

ಅವರು ನಗರದ ವಕೀಲರು, ಪದವಿಧರರನ್ನು ಭೇಟಿ ಮಾಡಿ ಕಾಂಗ್ರೆಸ್ ಪರವಾಗಿ ಮತಯಾಚನೆ ಮಾಡಿ ಮಾತನಾಡಿದರು. ಚಂದ್ರಶೇಖರ್ ಪಾಟೀಲ್ ಅವರಿಗೆ ಅಪಾರ ಅನುಭವವಿದ್ದು, ಒಂದು ಬಾರಿ ಸದಸ್ಯರಾಗಿ ಉತ್ತಮ ಕೆಲಸ ನಿರ್ವಹಿಸಿದ್ದಾರೆ, ಪದವಿಧರರ




ಹಲವು ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ, ಪರಿಷತ್ನಲ್ಲಿ ಅತಿ ಹೆಚ್ಚಿನ ಪ್ರಶ್ನೆಗಳನ್ನು ಮಾಡಿ ಉತ್ತರ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ, ಅನೇಕ ವಿದ್ಯಾ ಸಂಸ್ಥೆಗಳನ್ನು ನಡೆಸುವ ಮೂಲಕ ಅಲ್ಲಿನ ಸಮಸ್ಯೆಗಳ ಅರಿವಿದ್ದು, ಅವುಗಳನ್ನು ಬಗೆಹರಿಸುವ ಕೆಲಸ ಮಾಡಿದ್ದಾರೆ.

ಪ್ರಸ್ತುತ ಕಾಂಗ್ರೆಸ್ ಸರಕಾರವಿದೆ ಜೊತೆಗೆ ವಿದ್ಯಾವಂತ ನವ ಪದವಿಧರರಿಗೆ ಸರಕಾರ ಯುವನಿಧಿ ಮೂಲಕ ಸಹಾಯ ಕಲ್ಪಿಸುತ್ತಿರುವದು ಸರಕಾರದ ಉತ್ತಮ ಕಾರ್ಯವಾಗಿದ್ದು, ಈ ಭಾರಿ ಪುನಃ ಆಯ್ಕೆಯಾಗುವ ಮೂಲಕ ಅವರು ಹೆಚ್ಚಿನ ಕೆಲಸವನ್ನು ಸಿದ್ದರಾಮಯ್ಯ ಮತ್ತು ಡಿ. ಕೆ. ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರಕಾರ ಅವಧಿಯಲ್ಲಿ ಮಾಡಲಿದ್ದಾರೆ ಎಂದರು. ಸರಕಾರ ಯುವಜನರಿಗೆ ಉದ್ಯೋಗ, ಪದವಿಧರ ಶಿಕ್ಷಕರ ಬೇಡಿಕೆ, ಸರಕಾರಿ ನೌಕರರಿಗೆ ಏಳನೇ ವೇತನ ಆಯೋಗ, ಹೊಸ ಪಿಂಚಣಿ ರದ್ದುಗೊಳಿಸುವದು, ಖಾಸಗಿ ಶಿಕ್ಷಣ ಸಂಸ್ಥೆಗಳ ಸರಕಾರಿ ವ್ಯಾಪ್ತಿಗೆ ಒಳಪಡಿಸುವದು, ಬೋಧಕ ವರ್ಗದವರ ಮುಂಬಡ್ತಿಗೆ ಕ್ರಮ, ವಸತಿ ಶಿಕ್ಷಣ ಸಂಸ್ಥೆಗಳ ಸುಧಾರಣೆ ಕ್ರಮಗಳಿಗೆ ಕಾಂಗ್ರೆಸ್ ಗೆಲುವು ಅಗತ್ಯವಿದೆ ಎಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ಗುರುಬಸವರಾಜ ಹಳ್ಳಿಕೇರಿ, ಮುಖಂಡ ಮಂಜುನಾಥ ಜಿ. ಗೊಂಡಬಾಳ, ವಕೀಲರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಂಕರ ಬಿಸನಳ್ಳಿ, ಮುಖಂಡರಾದ ಸೌಭಾಗ್ಯಲಕ್ಷ್ಮೀ ಗೊರವರ, ವಕೀಲರಾದ ಹೆಚ್. ಹೆಚ್. ಮುರಡಿ, ಹರೀಶ ವಾರದ, ಝುಮ್. ಎಂ. ಖಾನ್, ಡಿ. ಲಂಕೇಶ, ದಾವಲ್ ಮಲಿಕ್, ಬಸವರಾಜ ಜಂಗ್ಲಿ, ದಾವಲ್ ಮಲಿಕ್, ಬೇನಾಳಪ್ಪ, ಎಸ್. ಬಿ. ಪಾಟೀಲ್, ಮಲ್ಲನಗೌಡ ಪಾಟೀಲ್, ಕಲ್ಲಪ್ಪ ಶಿವಪೂರ, ಸಿದ್ದು ಹೊಳೆಯಾಚೆ, ವಿ. ಪಿ. ಬಾಣದ, ರವಿ ಹೊಟ್ಟಿ ಇತರರು ಇದ್ದರು.

## ನವಲಿ ತಾಂಡಾದ ಅಂಬೇಡ್ಕರ್ ವಸತಿ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** 2024–25ನೇ ಸಾಲಿಗಾಗಿ ಜಿಲ್ಲೆಯ ಕನಕಗಿರಿ (ಗಂಗಾವತಿ) ತಾಲ್ಲೂಕಿನ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ನವಲಿತಾಂಡಾ ಶಾಲೆಯಲ್ಲಿ ಖಾಲಿ ಸ್ಥಾನಗಳಿಗೆ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ತಹಶೀಲ್ದಾರರವರಿಂದ ಪಡೆದ ಆರ್.ಡಿ ಸಂಖ್ಯೆಯುಳ್ಳ) ಸಲ್ಲಿಸಬೇಕು. ವಿದ್ಯಾರ್ಥಿ ಕುಟುಂಬದ ವಾರ್ಷಿಕ ಆದಾಯ ರೂ. 2.50 ಲಕ್ಷದೊಳಗಿರಬೇಕು.

2ನೇ ತರಗತಿಯಿಂದ 5ನೇ ತರಗತಿಯ ಖಾಲಿ ಸ್ಥಾನಗಳಿಗೆ ವಿಶೇಷ ವರ್ಗದವರಿಗೆ ಮೊದಲ ಆದ್ಯತೆ, ನಂತರ ಅಂಕಗಳ ಆಧಾರದ ಮೇಲೆ ಪ್ರವೇಶ ಕಲ್ಪಿಸಲಾಗುವುದು. ಪೌರಕಾರ್ಮಿಕರ ಮಕ್ಕಳು, ಸಫಾಯಿ ಕರ್ಮಚಾರಿಗಳ ಮಕ್ಕಳು, ಸ್ಮಶಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರ ಮಕ್ಕಳು, ದೇವದಾಸಿಯರ ಮಕ್ಕಳು, ಅಂಗವಿಕಲತೆಯನ್ನು ಹೊಂದಿರುವವರು, ಕೋವಿಡ್–19 ಮುಂತಾದ ಪ್ರಕೃತಿ ವಿಕೋಪದಿಂದ ತಂದೆ–ತಾಯಿಯನ್ನು ಕಳೆದುಕೊಂಡ ಮಕ್ಕಳು, ಏಕಪೋಷಕ ಮಕ್ಕಳು, ಯೋಜನಾ ನಿರಾಶ್ರಿತರ ಮಕ್ಕಳು, ಮಾಜಿ ಸೈನಿಕರ ಮಕ್ಕಳು, ಕೊಳಗೇರಿಗಳಲ್ಲಿ ವಾಸಿಸುತ್ತಿರುವವರ ಮಕ್ಕಳು, ಕೃಷಿ ಕಾರ್ಮಿಕರ ಮಕ್ಕಳು, ಸಾಲ ಬಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳು, ದೌರ್ಜನ್ಯದಲ್ಲಿ ನೊಂದವರ ಮಕ್ಕಳು, ಜೀತ ವಿಮುಕ್ತ ಮಕ್ಕಳು ಸೇರಿದಂತೆ ವಿಶೇಷ ವರ್ಗದ ಮಕ್ಕಳಿಗೆ ಮೊದಲನೇ ಆದ್ಯತೆ ನೀಡಲಾಗುವುದು.

ಅರ್ಜಿ ಸಲ್ಲಿಸಲು ಮೇ 30 ಕೊನೆಯ ದಿನವಾಗಿದ್ದು, ವಿದ್ಯಾರ್ಥಿಗಳು ಸಂಬಂಧಿಸಿದ ಅಗತ್ಯ ದಾಖಲೆಗಳೊಂದಿಗೆ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಗಂಗಾವತಿ ರವರ ಕಛೇರಿಗೆ ಅಥವಾ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ನವಲಿತಾಂಡಾ ಇಲ್ಲಿಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಗಂಗಾವತಿ ಹಾಗೂ ಮುಖ್ಯೋಪಾಧ್ಯಾಯರು, ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ನವಲಿತಾಂಡಾ ಇವರನ್ನು ಸಂಪರ್ಕಿಸಬಹುದು ಎಂದು ಗಂಗಾವತಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಳು ಬೆಳಗಲು ಸಂಸ್ಕಾರ ಸಂಸ್ಕೃತಿ ಬೇಕು: ಶ್ರೀ ರಂಭಾಪುರಿ ಜಗದ್ಗುರುಗಳು





**ಶ್ರೀ ರಂಭಾಪುರಿ ಪೀಠ(ಬಾಳೆಹೊನ್ನೂರು) :** ಬಾಳಿನ ಉನ್ನತಿಗೆ ಧರ್ಮಾಚರಣೆ ಬೇಕು. ಮನುಷ್ಯನಾಗಿ ಬಾಳುವುದು ಸಂಸ್ಕೃತಿಯ ಲಕ್ಷಣ. ಬಾಳು ಬೆಳಗಲು ಸಂಸ್ಕಾರ ಮತ್ತು ಸಂಸ್ಕೃತಿ ಅವಶ್ಯಕವೆಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು. ಅವರು ಗುರುವಾರ ಶ್ರೀ ರಂಭಾಪುರಿ ಪೀಠದಲ್ಲಿ ಹುಣ್ಣಿಮೆ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮನುಷ್ಯ ಶ್ರೇಷ್ಠ ಮತ್ತು ಕನಿಷ್ಠ ಆಗುವುದು ನಡವಳಿಕೆಯಿಂದ ಎಂಬುದನ್ನು ಮರೆಯಬಾರದು. ಪ್ರಪಂಚದ ರೋಗಗಳಿಗೆಲ್ಲ ಔಷಧಿ ಇಲ್ಲದಿದ್ದರೂ ಮನದ ರೋಗಗಳಿಗೆಲ್ಲ ಔಷಧ ಇದ್ದೇ ಇದೆ. ಮನದ ರೋಗವೇ ಇತರ ರೋಗಗಳಿಗೆ ಮೂಲ. ಎಲ್ಲ ಕಾಲಕ್ಕೂ ಸತ್ಯ ಸತ್ಯವೇ. ಸುಳ್ಳು ಸುಳ್ಳೇ. ಸತ್ಯ ಕಾಣಲು ಸಮಯ ಶ್ರಮ ಬೇಕಾಗುತ್ತದೆ. ನಡೆಯುವ ದಾರಿಯಲ್ಲಿ ತಾಕತ್ತು ಇದ್ದರೆ ತಡೆಯುವ ಶಕ್ತಿ ಯಾರಿಗೂ ಇರುವುದಿಲ್ಲ. ಮೂರ್ಖನ ಹೃದಯ ಅವನ ನಾಲಿಗೆಯಲ್ಲಿ ಇರುತ್ತದೆ. ವಿವೇಕಿಯ ನಾಲಿಗೆ ಅವನ ಹೃದಯದಲ್ಲಿ ಇರುತ್ತದೆ. ಸಮಯ ಸಂದರ್ಭಗಳು ಯಾವಾಗಲೂ ಬದಲಾಗುತ್ತಿರುತ್ತವೆ. ಆದರೆ ಒಳ್ಳೆಯ ಸಂಬಂಧಗಳು ಹಾಗೂ ನಿಜವಾದ ಸ್ನೇಹಿತರು ಎಂದೂ ಬದಲಾಗುವುದಿಲ್ಲ. ಇತಿಹಾಸ ನಿನ್ನೆ ಸುಖವಿತ್ತೆಂದು ಹೇಳುತ್ತದೆ. ವಿಜ್ಞಾನ ನಾಳೆ ಸುಖವಿರುವುದೆಂದು ಹೇಳುತ್ತದೆ. ಆದರೆ ಧರ್ಮ ಹೇಳುತ್ತದೆ. ಸತ್ಯವಾದ ಮನಸ್ಸು ಹಾಗೂ ಸ್ವಚ್ಛವಾದ ಹೃದಯವಿದ್ದರೆ ನಿತ್ಯವೂ ಸುಖ ಇರುವುದೆಂದು ಭಾರತೀಯ ತತ್ವಜ್ಞಾನ ಹೇಳುತ್ತದೆ. ಬದುಕು ಅನ್ನುವುದು ನದಿಯ ಕೊನೆಯಿಲ್ಲದ ಪಯಣ. ಯಾವುದೂ ನಮ್ಮ ಜೊತೆ ಉಳಿಯುವುದಿಲ್ಲ. ಉಳಿಯುವುದು ಒಂದೇ ಹೃದಯಕ್ಕೆ ತಟ್ಟಿದ ನೆನಪೆಂಬುದನ್ನು ತಿಳಿಯಬೇಕು. ಉಜ್ವಲ ಜೀವನ ಉನ್ನತಿ ಮತ್ತು ಶ್ರೇಯಸ್ಸಿಗಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರು ನಿರೂಪಿಸಿದ ವಿಚಾರ ಧಾರೆಗಳನ್ನು ಅನುಸರಿಸಿ ಬಾಳಿದರೆ ನೆಮ್ಮದಿ ಶಾಂತಿ ಪ್ರಾಪ್ತವಾಗುವುದೆಂದರು.


ಈ ಪವಿತ್ರ ಸಮಾರಂಭದಲ್ಲಿ ಮಳಲಿಮಠದ ಡಾ.ನಾಗಭೂಷಣ ಶಿವಾಚಾರ್ಯರು, ಕಾರ್ಜುವಳ್ಳಿ ಹಿರೇಮಠದ ಸದಾಶಿವ ಶಿವಾಚಾರ್ಯರು, ಹನುಮಾಪುರ ಹಿರೇಮಠದ ಡಾ.ಸೋಮಶೇಖರ ಶಿವಾಚಾರ್ಯರು, ಆಲೂರು ಹಿರೇಮಠದ ಶ್ರೀಗಳು, ವೀರೇಶ ಪಾಟೀಲ, ಮನು ಸಹೋದರರು ಭದ್ರಾವತಿ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಾಮೂಹಿಕ ಶಿವದೀಕ್ಷಾ ನೆರವೇರಿಸಲಾಯಿತು. ಬೆಳಿಗ್ಗೆ ಕ್ಷೇತ್ರದ ಎಲ್ಲ ದೈವಗಳಿಗೆ ಪೌರ್ಣಿಮಾ ಪ್ರಯುಕ್ತ ವಿಶೇಷ ಪೂಜೆ ಜರುಗಿ-ತು. ಆಗಮಿಸಿದ ಸಕಲ ಸದ್ಭಕ್ತರಿಗೆ ಅನ್ನ ದಾಸೋಹ ಜರುಗಿತು.

# ತಾಯಿ ಮಗಳಿಗೆ ವಿಮಾ ಹಣ ರೂ.15 ಲಕ್ಷ ಬಡ್ಡಿ ಸಮೇತಕೊಡಲು ಲೋಂಬಾರ್ಡ ವಿಮಾ ಕಂಪನಿಗೆ ಆಯೋಗದ ಆದೇಶ

**ಧಾರವಾಡ :** ಧಾರವಾಡ ಸರಸ್ವತಪುರದ ನಿವಾಸಿಯಾಗಿದ್ದ ಪ್ರಶಾಂತ ಶಾನಬಾಗ ಅನ್ನುವವರು ತನ್ನ ದ್ವಿ ಚಕ್ರ ವಾಹನದ ಮೇಲೆ ಪಿ.ಎ. ಕವರೇಜ್ ಸಮೇತ ವಿಮೆ ಮಾಡಿಸಿದ್ದರು. ಯಾವುದೇ ಅಪಘಾತದಿಂದ ವಿಮಾದಾರ ಮೃತನಾದಲ್ಲಿ ಅವನ ಅವಲಂಬಿತರಿಗೆ ರೂ.15 ಲಕ್ಷ ಪರಿಹಾರ ಕೊಡಲು ವಿಮಾ ಪಾಲಸಿಯಲ್ಲಿ ನಿಯಮ ಇತ್ತು. ಈ ಬಗ್ಗೆ ವಿಮಾದಾರ ಎದುರುದಾರ ವಿಮಾ ಕಂಪನಿಗೆ ರೂ.1489/- ಪ್ರಿಮಿಯಮ್ ಹಣ ಸಂದಾಯ ಮಾಡಿದ್ದರು. ದಿ:11/10/2022 ರಂದು ವಿಮಾದಾರ/ ಮೃತ ಪ್ರಶಾಂತ ವಾಹನ ಅಪಘಾತದಲ್ಲಿ ತೀವ್ರಗಾಯಗೊಂಡು ಮೃತರಾಗಿದ್ದರು. ಈ ಬಗ್ಗೆ ವಾಹನ ಚಾಲಕನ ಮೇಲೆ ಕ್ರಿಮಿನಲ್ ಪ್ರಕರಣ ಸಹ ದಾಖಲಾಗಿತ್ತು. ಆ ಎಲ್ಲ ದಾಖಲೆಗಳ ಸಮೇತ ಮೃತ ಪ್ರಶಾಂತನ ಹೆಂಡತಿ ಪ್ರೀತಿ ಮತ್ತು ಅವರ ಮಗಳಾದ ಪೂರ್ವಿರವರು ತಾವು ಮೃತನ ಸರಳ ವಾರಸುದಾರರಿದ್ದು ತಮಗೆ ರೂ.15 ಲಕ್ಷ ವಿಮಾ ಹಣಕೊಡುವಂತೆ ಎದುರುದಾರ ಆಯ್.ಸಿ.ಆಯ್.ಸಿ.ಆಯ್ ಲೋಂಬಾರ್ಡ ವಿಮಾ ಕಂಪನಿಗೆ ಕ್ಲೇಮ ಅರ್ಜಿ ಸಲ್ಲಿಸಿದ್ದರು. ಮೃತ ಪ್ರಶಾಂತ ಅಪಘಾತ ಕಾಲಕ್ಕೆ ಅಧಿಕೃತ ಚಾಲನಾ ಪತ್ರ ಹೊಂದಿರಲಿಲ್ಲ ಕಾರಣ ಅವನು ವಿಮಾ ಪಾಲಸಿ ಷರತ್ತನ್ನು ಉಲ್ಲಂಘಿಸಿದ್ದಾರೆಂದು ಎದುರುದಾರ ವಿಮಾ ಕಂಪನಿಯವರು ದೂರುದಾರನ ಕ್ಲೇಮನ್ನು ನಿರಾಕರಿಸಿದ್ದರು. ವಿಮಾ ಕಂಪನಿಗೆ ಹಲವುಬಾರಿ ವಿಮೆ ಹಣವನ್ನು ಪಾವತಿಸಲು ಕೇಳಿಕೊಂಡರೂ ಎದುರುದಾರರು ತಮಗೆ ವಿಮಾ ಹಣ ಅಥವಾ ಪರಿಹಾರ ಕೊಟ್ಟಿಲ್ಲ, ಅಂತಹ ವಿಮಾ ಕಂಪನಿಯವರ ನಡಾವಳಿಕೆ ಗ್ರಾಹಕರ ರಕ್ಷಣಾ ಕಾಯ್ದೆ ಅಡಿ ಸೇವಾ ನ್ಯೂನ್ಯತೆ ಆಗುತ್ತದೆ ಅಂತಾ ಹೇಳಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರುದಾರರು ದಿ:11/07/2023 ರಂದು ಧಾರವಾಡ ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಸದರಿದೂರಿನ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಿದ ಆಯೋಗ ಸಧ್ಯದ ಮೋಟಾರ ವಾಹನ ಕಾಯ್ದೆಯ ನಿಯಮದಂತೆ ಅಪಘಾತವಾದ ದಿನ 11/10/2022 ರಂದು ಮೃತ ಪ್ರಶಾಂತ ಇವರು ಚಾಲನಾ ಪತ್ರ ಹೊಂದಿರುವುದು ಕಂಡುಬರುತ್ತದೆ. ಹೊಸ ಮೋಟಾರ ವಾಹನ ಕಾಯ್ದೆಯ ನಿಯಮವನ್ನು ಅರ್ಥೈಸುವಲ್ಲಿ ಎದುರುದಾರ ವಿಮಾ ಕಂಪನಿಯವರು ವಿಫಲರಾಗಿದ್ದಾರೆಂದು ಆಯೋಗ ಅಭಿಪ್ರಾಯಪಟ್ಟು ತೀರ್ಪು ನೀಡಿದೆ. ಮೃತ ಅಧಿಕೃತ ಚಾಲನಾ ಪತ್ರ ಹೊಂದಿದ್ದರೂ ದೂರುದಾರರ ವಿಮಾ ಕ್ಲೇಮನ್ನು ತಿರಸ್ಕರಿಸಿರುವುದು ವಿಮಾ ನಿಯಮಗಳಿಗೆ ವಿರುದ್ಧವಾಗುತ್ತದೆ ಮತ್ತು ಅಂತಹ ಅವರ ನಡಾವಳಿಕೆ ಗ್ರಾಹಕರ ರಕ್ಷಣಾ ಕಾಯ್ದೆಯ ಉಲ್ಲಂಘನೆಯು ಆಗುತ್ತದೆ ಅಂತಾ ಆಯೋಗ ತನ್ನ ತೀರ್ಪಿನಲ್ಲಿ ತಿಳಿಸಿದೆ. ಇದ-ರಿಂದ ಎದುರುದಾರ ಆಯ್.ಸಿ.ಆಯ್.ಸಿ. ಲೋಂಬಾರ್ಡ ವಿಮಾ ಕಂಪನಿಯವರು ದೂರುದಾರರಿಗೆ ಗ್ರಾಹಕರ ರಕ್ಷಣಾ ಕಾಯ್ದೆ ಅಡಿ ಸೇವಾ ನ್ಯೂನ್ಯತೆ ಎಸಗಿರುವುದರಿಂದ ವಿಮೆ ತಿರಸ್ಕರಿಸಿದ ದಿನಾಂಕದಿಂದ ಶೇ8% ರಂತೆ ಬಡ್ಡಿ ಸಮೇತ ರೂ.15 ಲಕ್ಷ ವಿಮಾ ಹಣ ದೂರುದಾರರಿಗೆ ನೀಡುವಂತೆ ಆಯೋಗ ಆದೇಶಿಸಿದೆ. ದೂರುದಾರಿಗೆ ಆಗಿರುವ ಅನಾನುಕೂಲ ಮತ್ತು ಮಾನಸಿಕ ಹಿಂಸೆಗಾಗಿ ಅವರಿಗೆ ರೂ.50,000/- ಪರಿಹಾರ ಮತ್ತು ರೂ.10,000/- ಪ್ರಕರಣದ ಖರ್ಚು ವೆಚ್ಚ ಕೊಡುವಂತೆ ಆಯ್.ಸಿ.ಆಯ್.ಸಿ.ಆಯ್ ಲೋಂಬಾರ್ಡ ಎದುರುದಾರ ವಿಮಾ ಕಂಪನಿಯವರಿಗೆ ಆಯೋಗ ನಿರ್ದೇಸಿದೆ.

# ನಮಸ್ಕಾರ ಮಹತ್ವ



ಸನಾತನ ಧರ್ಮದಲ್ಲಿ ದೇವರಿಗೆ ತಂದೆ-ತಾಯಿ-ಹಿರಿಯರಿಗೆ, ಮಾಡುವ ನಮಸ್ಕಾರ ಸಂಸ್ಕೃತಿಯಲ್ಲಿ ಅಪಾರವಾದ ಸಂದೇಶಾತ್ಮಕ ಅಡಗಿದೆ, ಅದು ಕೇವಲ ನೋಟಕ್ಕೆ ನಮಸ್ಕಾರ ಸಣ್ಣತನದ ಮಾತಲ್ಲ.

ನಮಸ್ಕಾರ ಮಾಡಬೇಕಾದರೆ ಭಕ್ತಿ-ವಿನಯ- ಶ್ರದ್ಧಾ ಗುಣಗಳಿಂದ ಬಗ್ಗೆ ಸರಿಯಾದ ರೀತಿಯಲ್ಲಿ ನಮಸ್ಕಾರ ಮಾಡಬೇಕು ಆಧುನೀಕರಣ ಪದ್ಧತಿ ಜಗತ್ತಿನಲ್ಲಿ ಪ್ರಾರಂಭವಾದಗಿನಿಂದ 'ನಮಸ್ಕಾರ' ತನ್ನ ಮಹತ್ವ ಕಳೆದುಕೊಂಡಿದೆ.

ಹಲೋ-ಹಾಯ್, ಗುಡ್ ಮಾರ್ನಿಂಗ್ ಮುಂತಾದ ಶಬ್ದಗಳಿಂದ ನಮಸ್ಕಾರ ಅಲಂಕರಿಸಿದೆ. ಇದು ತಪ್ಪು ಹಾದಿ, ಮನೆಯಲ್ಲಿ ಮಕ್ಕಳಿಗೆ ಭಾರತೀಯ ಸಂಸ್ಕೃತಿಯಲ್ಲಿ 'ನಮಸ್ಕಾರ' ಎಂಬ ಅರ್ಥ ತಿಳಿಸಿಕೊಡಲೇಬೇಕು 'ನಮಸ್ಕಾರ' ಮಾಡುವದರಿಂದ ವ್ಯಕ್ತಿ ಚಿರಂಜೀವಿಯಾಗುವನೆಂಬ ಪೌರಾಣಿಕ ಕಥೆಯುಂಟು. ಶಾಸ್ತ್ರದ ಪ್ರಕಾರ ನಮಸ್ಕಾರ ಹುಟ್ಟಿದ್ದು ಸಂಸ್ಕೃತ ಶಬ್ದದಿಂದ. 'ನಮಸ್ ಮತ್ತು ಕಾರ್' ಎಂಬ ಎರಡು ಪ್ರತ್ಯಕ ಶಬ್ದಗಳಿಂದ ಕೂಡಿದೆ. ಈಶಬ್ದವು ಕಾಯಾ ವಾಚಾ, ಮನಸಾ, ನಮ್ಮನ್ನೂ ಕಾರ್ಯ ಪ್ರವೃತ್ತಿಗೊಳಿಸುತ್ತದೆ. 'ಅಹಂ' ಕಾರವನ್ನು ಅಳಿಸಿ ಹಾಕುತ್ತದೆ. ಎರಡು ಹಸ್ತಗಳಿಂದ ದೇಹಬಾಗಿಸಿ ಎದುರಿಗಿರುವವರನ್ನು ಅವರ ಅಂತರ್ಯಾಮಿಯಾಗಿ ಶ್ರೀಹರಿಗೆ ಮಾಡುವೆ ಎಂದು ಅರಿಯಬೇಕು. ನಮಸ್ಕಾರ ಮಾಡಿದಾಗ ಅವರು ಪ್ರತಿಯಾಗಿ ನೀಡಿದ ಶುಭ ನುಡಿಗಳು ಅನುಗ್ರಹಿಸುತ್ತವೆ ನಾವು ನಮ್ಮ ಅಂತಸ್ತು-ಅಧಿಕಾರ ಬೆಲೆ ಕಟ್ಟದೆ ಮನದಾಳದಿಂದ ನಮಸ್ಕರಿಸಬೇಕು ಒಲ್ಲದ ಮನಸ್ಸಿನಿಂದ ಸಣ್ಣವರಾಗದೆ ಅಂತರ್ಯಾಮಿ ಶ್ರೀಹರಿಯ ಆಶೀರ್ವಾದಕೆ,?ಕ ನಮಸ್ಕಾರಕೆ,?ಕಗೌರವ ಕೊಡಬೇಕು. ಪುರಾಣಗ್ರಂಥಗಳಲ್ಲಿ ಮಾರ್ಕೇಂಡೆಯ ಋಷಿಗಳು ಹುಟ್ಟಿದಾಗ ಆ ಋಷಿಗಳು. ಮನೆಯ ಸಂಸ್ಕೃತಿ ಹಾಗೂ ತಂದೆ-ಯ ಆದೇಶದಂತೆ ಆಶ್ರಮಕ್ಕೆ ಬರುವ ಜ್ಞಾನಿಗಳಿಗೆ, ಗುರು ಹಿರಿಯರಿಗೆ ತ್ರಿಕರ್ಣಪೂರ್ವಕವಾಗಿ ನಮಸ್ಕಾರಮಾಡಿ 'ಚಿರಂಜೀವಿ' ಪಟ್ಟ ಪಡೆದು ವಿಖ್ಯಾತರಾಗಿದ್ದಾರೆ. ಇಂತಹ ಕಥೆಗಳನ್ನು ಮಕ್ಕಳಿಗೆ ಹೇಳಿ ನಮಸ್ಕಾರ ಮಹತಿ ತಿಳಿಸಬೇಕು ರೂಢಿಸಬೇಕು ನಿತ್ಯ ಬೆಳ್ಳಗೆ- ಸಾಯಂಕಾಲ ಮಕ್ಕಳಿಂದ ದೇವರಿಗೆ ಹಿರಿಯರಿಗೆ ನಮಸ್ಕಾರ ಮಾಡಿಸಬೇಕು, ರಜೆ ಕಾಲದಲ್ಲಿ ಹಬ್ಬ-ಹರಿದಿನಗಳ್ಳಲ್ಲಿ ಮಂದಿರ-ಮಠಗಳಿಗೆ ಕರೆದುಕೊಂಡುಹೋಗಿ ದೇವರಿಗೆ ನಮಸ್ಕಾರ ಪ್ರದಕ್ಷಿಣೆ ಹಾಕಿಸಬೇಕು ನಮಸ್ಕಾರದಲ್ಲಿ ಅಡಗಿದೆ ಆಗಾಧಶಕ್ತಿದೈವರೂಪ ನಮಸ್ಕಾರ ಮಾಡುವದು ಉಪಕಾರ ಅಲ್ಲವೇ ಅಲ್ಲ. ನಮ್ಮ ಉದ್ಧಾರವೆಂದು ತಿಳಿಯಿರಿ ಈ ಸಂಸ್ಕೃತಿ ಜೀವ ಸ್ವರೂಪವನ್ನೇ ರಕ್ಷಿಸುವದು. ಅದು ಸಣ್ಣತನವೆಂದು ತಿಳಿಯದೇ ಸಂಪ್ರದಾಯ ನಿಷ್ಠೆ- ಶ್ರದ್ಧೆ ಭಕ್ತಿಯಿಂದ ನಮಸ್ಕಾರ ಮಾಡಿದರೆ ಬದುಕು ಚೇತನದ ಪರ್ವತವಾಗುತ್ತದೆ ಬಾಳು ಬಂಗಾರವಾಗುವದರಲ್ಲಿ ಸಂಶಯವಿಲ್ಲ

● ಸೌ॥ ಗೀತಾ. ಸಂ. ಮಿರ್ಜಿ

# ರಾಷ್ಟ್ರೀಯ ಸಾಗರೋತ್ತರ ವಿದ್ಯಾರ್ಥಿ ವೇತನ ಯೋಜನೆ (ಎನ್‌ಓಎಸ್)ಗೆ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

**ಧಾರವಾಡ :** ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ 2024-25ನೇ ಸಾಲಿನಲ್ಲಿ ರಾಷ್ಟ್ರೀಯ ಸಾಗ-ರೋತ್ತರ ವಿದ್ಯಾರ್ಥಿ ವೇತನ ಯೋಜನೆ (ಎನ್‌ಓಎಸ್)ಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸ್ನಾತಕೋತ್ತರ ಪದವಿ, ಪಿಹೆಚ್.ಡಿ ಉನ್ನತ ವ್ಯಾಸಂಗ ಮಾಡುವಂತಹ ವಿದ್ಯಾರ್ಥಿಗಳು ಮೇ 31, 2024 ರೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಧಾರವಾಡ ಜಿಲ್ಲೆಯ ಆಯಾ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಮತ್ತು ದೂರವಾಣಿ ಸಂಖ್ಯೆ. 0836-2447201 ಹಾಗೂ ವೆಬ್‌ಸೈಟ್ https://overseas.tribal.gov.in ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿಪ್ಪರಗಿ ಆಣೆಕಟ್ಟೆಗೆ ಬಾರದ 'ಮಹಾ' ನೀರು-ಮಹಿಷವಾಡಗಿಗೆ ಸೀಮಿತ



**ರಬಕವಿ-ಬನಹಟ್ಟಿ :** ಕಳೆದ ವಾರ ಮಹಾರಾಷ್ಟ್ರದ ರಾಜಾಪುರ ಜಲಾಶಯದಿಂದ ಸುಮಾರು ಸಾವಿರ ಕ್ಯುಸೆಕ್‌ನಷ್ಟು ಹೆಚ್ಚುವರಿಯಾದ ನೀರನ್ನು ಹೊರಬಿಡಲಾಗಿತ್ತು. ಶನಿವಾರ ಸಮೀಪದ ಮಹಿಷವಾಡಗಿ ಸೇತುವೆಗೆ ಬಂದಿದ್ದು, ಅತ್ಯಂತ ಅಲ್ಪ ಪ್ರಮಾಣದ ಒತ್ತಡದಿಂದ ನೀರು ಬರುತ್ತಿದ್ದು, ಮುಂದಿನ ಹಿಪ್ಪರಗಿ ಜಲಾಶಯ ತಲುಪುವದು ಅಸಾಧ್ಯವಾಗಿದೆ.

ಈಗಾಗಲೇ ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳ ಬಹುತೇಕ ಪಟ್ಟಣ ಹಾಗು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ನಿಂತು ಹೋಗಿತ್ತು. ಬೆಳೆ ಬೆಳೆದಿದ್ದ ರೈತರು ಕಂಗಾಲಾಗುವಲ್ಲಿ ಕಾರಣವಾಗಿತ್ತು. ಇದೀಗ ಕೃಷ್ಣೆ ಕೊಂಚ ಮೈತುಂಬಿಕೊಂಡಿರುವ ಕಾರಣ ಜನ-ಜಾನುವಾರುಗಳು ನಿರಾಳವಾಗಿವಲ್ಲಿ ಕಾರಣವಾಗಿದೆ.

ನೀರು ಪೂರೈಕೆ ಪ್ರಾರಂಭ: ಕಳೆದೊಂದು ವಾರದಿಂದ ರಬಕವಿ-ಬನಹಟ್ಟಿ ಅವಳಿ ನಗರದ ಜನತೆಗೆ ನೀರು ಪೂರೈಕೆಗೆ ಸ್ಥಗಿತಗೊಂಡಿತ್ತು. ಇದೀಗ ಮಹಿಷವಾಡಗಿ ಬ್ಯಾರೇಜ್‌ಗೆ ನೀರು ಶೇಖರಣೆಯಾಗಿರುವ ಹಿನ್ನಲೆ ರಬಕವಿಗೆ ಈಗಾಗಲೇ ನೀರು ಪೂರೈಕೆ ಪ್ರಾರಂಭವಾಗಿದ್ದು, ಇಂದು ರವಿವಾರದಿಂದ ಬನಹಟ್ಟಿ ಪಟ್ಟಣಕ್ಕೂ ನೀರೂ ಪೂರೈಕೆ ಮಾಡಲಾಗುವದೆಂದು ಪೌರಾಯುಕ್ತ ಜಗದೀಶ ಈಟಿ ಪತ್ರಿಕೆಗೆ ತಿಳಿಸಿದರು.

# ಕ್ರೈಂ ತಡೆಯಲು ಪೊಲೀಸರಿಂದ ಗ್ರಾಮ ವಾಸ್ತವ್ಯ

● ಮಲ್ಲಿಕಾಜುನ ತುಂಗಳ

**ರಬಕವಿ-ಬನಹಟ್ಟಿ :** ಈಚೆಗೆ ಗ್ರಾಮೀಣ ಪ್ರದೇಶಗಳಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನಲೆ ಬನಹಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯ ಹಳ್ಳಿಗಳಲ್ಲಿ ಗ್ರಾಮ ವಾಸ್ತವ್ಯ ರೂಪಿಸುತ್ತಿರುವ ಹಿನ್ನಲೆ ಪೊಲೀಸರು ಖುಷಿಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಪರಾಧ ಕಾನೂನುಗಳ ಬಗ್ಗೆ ಜನತೆಗೆ ತಿಳಿಹೇಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ.

ಪ್ರತಿ ತಿಂಗಳು ಮೂರು ಗ್ರಾಮಗಳಲ್ಲಿ ವಾಸ್ತವ್ಯ ನಡೆಸುತ್ತಿರುವ ಪೊಲೀಸ್ ತಂಡ ಶನಿವಾರ ರಾತ್ರಿ ಯಲ್ಲಟ್ಟಿ ಹಾಗು ಯರಗಟ್ಟಿ ಗ್ರಾಮದಲ್ಲಿ ವಾಸ್ತವ್ಯ ನಡೆಸಿದರು.

ಪಿಎಸ್‌ಐ ಶಾಂತಾ ಹಳ್ಳಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಅಪರಾಧ ಕೃತ್ಯಗಳು ಹೆಚ್ಚಾಗಿವೆ. ಅದರಲ್ಲೂ ಕೊಲೆ, ಮನೆಗಳ್ಳತನ, ದರೋಢೆಗಳಂತಹ ಪ್ರಕರಣಗಳಿವೆ ಕಡಿವಾಣ ಹಾಕಿ, ಇದರ ಜೊತೆಗೆ ಅಲ್ಲಲ್ಲಿ ಸಣ್ಣಪುಟ್ಟ ಆಸ್ತಿ ವ್ಯಾಜ್ಯಗಳು ಕೂಡಾ ಹೆಚ್ಚಾಗಿರುವದರಿಂದ ಅನೇಕರು ತೊಂದರೆ ಅನುಭವಿಸುವದು ಜನತೆ ಎಂದರು.



ಸಾಮಾನ್ಯವಾಗಿ ಪೊಲೀಸರೆಂದರೆ ಅನೇಕರಿಗೆ ಭಯವಿರುತ್ತದೆ. ಹೀಗಾಗಿ ಯಾರಿಂದಾದರೂ ತೊಂದರೆ ಆದರೂ ನ್ಯಾಯ ಕೇಳಲು ಅನೇಕರು ಪೊಲೀಸರ ಬಳಿ ಹೋಗಲು ಭಯಪಡುತ್ತಾರೆ. ಜನರಲ್ಲಿನ ಭಯವನ್ನು ದೂರ ಮಾಡುವದರ ಜೊತೆಗೆ ಜನರಿಗೆ ಕಾನೂನಿನ ಬಗ್ಗೆ ಅರಿವು ಮೂಡಿಸುವ ಮೂಲಕ ಅಪರಾಧ ಕೃತ್ಯಗಳನ್ನು ತಡೆಯುವದು ಗ್ರಾಮ ವಾಸ್ತವ್ಯದ ಉದ್ದೇಶವೆಂದು ಪಿಎಸ್‌ಐ ಶಾಂತಾ ಹಳ್ಳಿ ತಿಳಿಸಿದರು.

> "ಜಿಲ್ಲಾ ವರಿಷ್ಠಾಧಿಕಾರಿಗಳ ಆದೇಶದಂತೆ ಪ್ರತಿ ತಿಂಗಳು ಮೂರು ಗ್ರಾಮಗಳಲ್ಲಿ ವಾಸ್ತವ್ಯ ಕಾರ್ಯ ನಡೆಸುತ್ತಿದ್ದೇವೆ. ಇದರಿಂದ ಜನತೆಯ ಸಮಸ್ಯೆಗೆ ಸ್ಪಂದನೆಯಾಗುತ್ತಿದೆ".
>
> ◆ ಶಾಂತಾ ಹಳ್ಳಿ, ಪಿಎಸ್‌ಐ, ಬನಹಟ್ಟಿ.

ಗ್ರಾಮ ವಾಸ್ತವ್ಯದಲ್ಲೇನು? : ಗ್ರಾಮದ ಸರ್ಕಾರಿ ಹಾಸ್ಟೇಲ್, ಶಾಲಾ-ಕಾಲೇಜು, ಅನಿವಾರ್ಯ ಪ್ರಸಂಗದಲ್ಲಿ ದೇವಾಲಯ ಆವರಣದಲ್ಲಿ ವಾಸ್ತವಯ ಹೂಡುವ ಪೊಲೀಸ್ ಅಧಿಕಾರಿಗಳು, ಆ ಗ್ರಾಮದಲ್ಲಿನ ಮನೆ ಮನೆಗೆ ಹೋಗಿ ಕಾನೂನಿನ ಬಗ್ಗೆ ಅರಿವು ಮೂಡಿಸುತ್ತಾರೆ. ಗ್ರಾಮದಲಲಿನ ಜನರ ಜೊತೆ ಸೇರಿ ಸಭೆಯನ್ನು ನಡೆಸಿ, ಕಾನೂನು ಸುವ್ಯವಸ್ಥೆ ಕಾಪಾಡುವಂತೆ ಮನವಿ ಮಾಡುತ್ತಿದ್ದಾರೆ. ಚಿಕ್ಕ ಪುಟ್ಟ ಸಮಸ್ಯೆಗಳನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಕಾನೂನನ್ನು ಯಾರೂ ಕೈಗೆತ್ತಿಕೊಳ್ಳಬಾರದು ಎಂದು ಜನರಿಗೆ ಮನವಿ ಮಾಡುತ್ತಿದ್ದಾರೆ.

> "'ಪೊಲೀಸ್ ಗ್ರಾಮ ವಾಸ್ತವ್ಯ ಇದೇ ಮೊದಲು. ಗ್ರಾಮದಲ್ಲಿ ಇದೀಗ ಪೊಲೀಸರ ಭಯ ದೂರವಾಗಿದೆ. ಅಪರಾಧ ಹಾಗು ಅಕ್ರಮ ಚಟುವಟಿಕೆಗಳ ಸಂಪೂರ್ಣ ಹತೋಟಿಗೆ ಗ್ರಾಮಸ್ಥರೊಂದಿಗೆ ಪರಸ್ಪರ ಸಂಪರ್ಕದಿಂದ ಯಶಸ್ವಿಯಾಗಲಿದೆ'.
>
> ◆ ಮಹಾದೇವ ಮೋಪಗಾರ, ಅಧ್ಯಕ್ಷ, ಗ್ರಾಪಂ, ಯಲ್ಲಟ್ಟಿ.

ಜನ ಮೆಚ್ಚುಗೆ: ಗ್ರಾಮೀಣ ಭಾಗದ ಜನರು ಇನ್ನೂ ಕೂಡಾ ಪೊಲೀಸರೆಂದರೆ ಭಯ. ಗ್ರಾಮ ವಾಸ್ತವ್ಯದ ಮೂಲಕ ಜನರ ಮನೆ ಬಾಗಿಲಿಗೆ ತೆರಳಿ ನಿಮ್ಮೊಂದಿಗೆ ನಾವಿದ್ದೇವೆಂಬ ಅಭಯ ನೀಡಿ, ಜನಸ್ನೇಹಿ ಪೊಲೀಸ್ ವ್ಯವಸ್ಥೆ ಜಾರಿ ಬಗ್ಗೆ ಸಂತಸ ತಂದಿದೆ.

## ಕುಲರತ್ನಭೂಷಣ ಮಹಾರಾಜರಿಂದ ಆಶೀರ್ವಾದ ಪಡೆದ ಜನತೆ

# ಪ್ರಾಮಾಣಿಕತೆ ಜೀವನದ ಉಸಿರಾಗಲಿ



**ರಬಕವಿ-ಬನಹಟ್ಟಿ :** ಪ್ರಾಮಾಣಿಕತೆ, ನಿಸ್ವಾರ್ಥಕತೆ ಮತ್ತು ಸತ್ಸಪ್ರತಿಪಾದನೆ ಜೀವನದ ಉಸಿರಾಗಬೇಕು. ಸತ್ಯ ಪೂರ್ಣವಾದ ವ್ಯಕ್ತಿತ್ವ ನಿರ್ಮಾಣಕ್ಕೆ ಇವು ಆಧಾರ ಸ್ತಂಭಗಳಾಗಿವೆ ಎಂದು ಹಳಿಂಗಳಿ ಭದ್ರಗಿರಿ ಬೆಟ್ಟದ ಕುಲರತ್ನಭೂಷಣ ಮಹಾರಾಜರು ಹೇಳಿದರು.

ಬನಹಟ್ಟಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜ ಮುಕ್ತಿ, ಸೇವಾ ಕಾರ್ಯಗಳಿಂದ ಸಮಾಜ ಗುರುತಿಸುತ್ತದೆ. ಇವೆಲ್ಲ ಶಾಂತಿಯುತ ಜೀವನಕ್ಕೆ ಸಹಕಾರಿ. ಇಂದು ಶ್ರೀಸಾಮಾನ್ಯನ ಬದುಉ ದುಸ್ತರವಾಗುತ್ತಿದೆ. ಇದಕ್ಕೆ ನಮ್ಮ ಸ್ವಾರ್ಥದಿಂದ ಕೂಡಿರುವ ಮನಸ್ಸು ಕಾರಣವೆಂದರು.

ಪ್ರಕಾಶ ದೇಸಾಯಿ ಮಾತನಾಡಿ, ಎಲ್ಲೆಲ್ಲೂ ಮೊಬೈಲ್ ಸಂಸ್ಕೃತಿ ತಾಂಡವವಾಡುತ್ತಿದೆ. ಅದನ್ನು ದೂರ ಮಾಡಿ ಮಕ್ಕಳಿಗೆ ಸಂಸ್ಕೃತಿಯ ಪರಿಚಯ ಮಾಡಿಕೊಡುವ ಅಗತ್ಯವಿದೆ. ಮಕ್ಕಳಲ್ಲಿ ಕಥೆ ಕವನ ಲೇಖನ ಪ್ರಬಂಧ ಬರೆಯುವ ಹವ್ಯಾಸ ಬೆಳೆಸಬೇಕೆಂದರು.

ಇದೇ ಸಂದರ್ಭ ರಮೇಶ ಮಹಿಷವಾಡಗಿ, ಶ್ರೀಶೈಲ ದಭಾಡಿ, ಭೀಮಶಿ ಗಾಡಿವಡ್ಡರ, ಮಲ್ಲಿಕಾರ್ಜುನ ಬಾವಲತ್ತಿ, ಶಿವು ಬಾಗೇವಾಡಿ, ಪ್ರಶಾಂತ ಕೊಳಕಿ, ಶಿವು ಗುಂಡಿ, ಗುರಸಿದ್ದಪ್ಪ ಚನಾಳ, ಪಾನಶೆಟ್ಟಿ, ಅಶೋಕ ತಳವಾರ ಸೇರಿದಂತೆ ಅನೇಕರಿದ್ದರು.

# ಭಗೀರಥರ ಜಾತ್ರಾ ಮಹೋತ್ಸವ ಅದ್ದೂರಿ ಮೆರವಣಿಗೆ ಒಳ್ಳೆಯ ಪರಿಸರ ನಿರ್ಮಾಣವಾಗಲಿ: ಪ್ರಭು ಸ್ವಾಮೀಜಿ

**ಮಹಾಲಿಂಗಪುರ :** ಪಟ್ಟಣದಕೆಂಗೇರಿಮಡ್ಡಿಯಲ್ಲಿ ಮುಧೋಳ ತಾಲ್ಲೂಕು ಭಗೀರಥಉಪ್ಪಾರ ಸಮಾಜ ಸೇವಾ ಸಂಘ ಹಾಗೂ ಯುವಕ ಸಂಘದಿಂದ ಪಟ್ಟಣದಲ್ಲಿ 14ನೇ ವರ್ಷದ ಭಗೀರಥ ದೇವಸ್ಥಾನದ ಜಾತ್ರಾ ಮಹೋತ್ಸವಹಾಗೂ ಭಗೀರಥ ಜಯಂತ್ಯೋತ್ಸವ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಮಹಾಲಿಂಗೇಶ್ವರ ದೇವ ಸ್ಥಾನದಿಂದ ಭಗೀರಥ ದೇವಸ್ಥಾನದವರೆಗೆ ಭಗೀರಥ ಭಾವಚಿತ್ರದ ಅದ್ದೂರಿ ಮೆರವಣಿಗೆ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರಸ್ವಾಮಿಜಿ ಚಾಲನೆ ನೀಡಿದರು. ಮೆರವಣಿಗೆ ಮುಂದೆ ಸಾಗಿದ ಕುಂಭ ಹೊತ್ತ ಮಹಿಳೆಯರು ಗಮನಸೆಳೆದರು. ಕರಡಿ ಮಜಲು, ಹಂದಿಗುಂದದ ಜಾಂಜ್ ಪಥಕ್ ಸೇರಿದಂತೆ ವಿವಿಧವಾದ್ಯವೃಂದ ಮೆರವಣಿಗೆಗೆ ಮೆರಗು ನೀಡಿದವು.



ನಂತರ ಭಗೀರಥ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಿಮ್ಮಡ ವಿರಕ್ತಮಠದ ಪ್ರಭು ಸ್ವಾಮೀಜಿ ಆಶೀರ್ವಚನ ನೀಡಿ, ಎಲ್ಲರೂ ಸೇರಬೇಕೆಂಬ ಉದ್ದೇಶದಿಂದ ಜಯಂತಿಗಳನ್ನು ಎಲ್ಲ ಸಮಾಜದವರುಆಚರಣೆ ಮಾಡುತ್ತಿದ್ದಾರೆ. ಭಗೀರಥರ ಹೆಸರಿನಲ್ಲಿದೇವಸ್ಥಾನ ನಿರ್ಮಿಸಿ ಕೆಳ ಹಂತದಜನರನ್ನು ಗುರುತಿಸಿ ಸಹಾಯ ಸಹಕಾರ ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಸಮಾಜದಲ್ಲಿ ಒಳ್ಳೆಯ ಪರಿಸರ ನಿರ್ಮಾಣವಾಗಬೇಕುಎಂದರು.

ರನ್ನಬೆಳಗಲಿಯ ಸಿದ್ಧರಾಮ ಶಿವಯೋಗಿಗಳು ಮಾತನಾಡಿ, ಸಮಾಜದಲ್ಲಿ ತುಳಿತಕ್ಕೆ ಒಳಗಾದವರನ್ನು ಗುರುತಿಸಿ ಮೇಲಕ್ಕೆ ಎತ್ತುವ ಕಾರ್ಯವಾಗಬೇಕು. ಮಕ್ಕಳಿಗೆ ಸಂಸ್ಕಾರ ನೀಡುವ ಕಾರ್ಯವಾಗಬೇಕುಎಂದರು.

ಸಾನಿಧ್ಯವಹಿಸಿದ್ದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು.ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ 91 ರಷ್ಟುಅಂಕ ಪಡೆದ ಕೆಎಲ್‌ಇ ಪಪೂ ಕಾಲೇಜಿಗೆ ಪ್ರಥಮ ಸ್ಥಾನ ಪಡೆದ ಸಮಾಜದ ಸಾವಿತ್ರಿ ಬಸಪ್ಪ ಲಾಲಿಬುಡ್ಡಿ ಹಾಗೂ ಸಮಾಜದ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಮುಖಂಡರಾದ ಮಹಾಂತೇಶ ಹಿಟ್ಟಿನಮಠ, ಪರಪ್ಪ ಬ್ಯಾಕೂಡ, ಮಹಾಲಿಂಗಪ್ಪ ಭೀಮಪ್ಪ ಲಾತೂರ, ಮಲ್ಲಪ್ಪ ಮುದಕಪ್ಪಗೋಳ, ಯಮನು ಉಪ್ಪಾರ, ಲಕ್ಷ್ಮಣ ಮುಗಳಖೋಡ,ಬಿ.ವೈ.ಪೂಜೇರಿ, ಹಣಮಂತರಾ. ಲಾತೂರ, ಶಿವಾನಂದ ಬಿರಾಜನವರ, ವಿಜಯ ಲಾತೂರ, ಮಹಾದೇವ ಬೆಳವಂಕಿ, ಮುತ್ತಪ್ಪ ಲ.ಲಾತೂರ, ಮಹಾಲಿಂಗ ಭ,ಲಾತೂರ, ಶಂಕರ ಮುಗಳಖೋಡ, ಮುರಗೆಪ್ಪ ಭ.ಲಾತೂರ, ಮುತ್ತಪ್ಪ ಮಾ.ಲಾತೂರ, ನಿಂಗಪ್ಪ ಉಸಳಿ, ರಾಜು ಮುದಕಪ್ಪಗೋಳ, ಮುತ್ತಪ್ಪ ಇದ್ಲಿ, ನಂದೇಶ ಲಾತೂರ ಸೇರಿದಂತೆ ಹಲವರು ಇದ್ದರು.

# ಜಂಬಗಿ, ಆಹೇರಿ, ಹುಣಶ್ಯಾಳ(ಮಾದಾಳ) ಕೆರೆಗಳನ್ನು ಶಾಶ್ವತವಾಗಿ ಕೆರೆ ನೀರು ತುಂಬಿಸುವಂತೆ ಆಗ್ರಹ




**ವಿಜಯಪುರ :** ಕೆರೆಗೆ ನೀರು ತುಂಬುವ ಯೋಜನೆಯಡಿ ಜಂಬಗಿ, ಆಹೇರಿ, ಹುಣಶ್ಯಾಳ(ಮಾದಾಳ) ಕೆರೆಗಳನ್ನು ಪ್ರತಿವರ್ಷ ತುಂಬಬೇಕು ಮತ್ತು ಈ ಎಲ್ಲಾ ಕೆರೆಗಳನ್ನು ಇಲಾಖೆಯ ಸುಪರ್ದಿಗೆ ಪಡೆದು ಅಭಿವೃದ್ಧಿ ಪಡೆಸಿ, ನಷ್ಟಗೊಂಡ ರೈತರಿಗೆ ಪರಿಹಾರ ನೀಡುವಂತೆ ಆಗ್ರಹಿಸಿ ಕಳೆದ 7 ದಿನಗಳಿಂದ ಜಂಬಗಿ ಕೆರೆಯಲ್ಲಿ ಅನಿರ್ದಿಷ್ಟ ಹೋರಾಟ ಮಾಡುತ್ತಿರುವ ರೈತರೆಲ್ಲರು ಕೂಡಿಕೊಂಡು ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ನೀರು ತುಂಬಿಸುವವರೆಗೂ ಹೋರಾಟ ಜಿಲ್ಲಾಧೀಕಾರಿಗಳ ಕಚೇರಿಯಲ್ಲಿಯೇ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಪದಾಧಿಕಾರಿಗಳು ಸುಮಾರು 3 ಘಂಟೆಗಳ ಕಾಲ ಜಿಲ್ಲಾಡಳಿತದ ವಿರುದ್ಧ ಘೋಷಣೆ ಹಾಕುತ್ತಾ ಕುಳಿತುಕೊಂಡರು.

ಜಿಲ್ಲಾಧ್ಯಕ್ಷರಾದ ಸಂಗಮೆಶ ಸಗರ ಅವರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡುತ್ತಾ ವಿಜಯಪುರ ಜಿಲ್ಲೆ ಹಾಗೂ ತಾಲೂಕಿನ ಜಂಬಗಿ ಕೆರೆಯೂ ಕೆರೆ ನೀರು ತುಂಬುವ ಯೋಜನೆಯಡಿ ಇದ್ದು, ಇಲ್ಲಿಯವರೆಗೂ ಒಮ್ಮೆಯೂ ತುಂಬಿಸಿರುವುದಿಲ್ಲ, ಹಾಗೆ ಉಳಿದಂತೆ ಆಹೇರಿ,ಹುಣಶ್ಯಾಳ(ಮಾದಾಳ)ಕೆರೆಗಳನ್ನು ಕೆರೆ ನೀರು ತುಂಬುವ ಯೋಜನೆಯಡಿ ಸೇರಿಸಬೇಕು, ಅವುಗಳನ್ನು ಪ್ರತಿವರ್ಷ ಬೇಸಿಗೆಯಲ್ಲಿ ನೀರು ತುಂಬಿಸಬೇಕು ಎಂದರು.

ಈ ವೇಳೆ ವಿಜಯಪುರ ತಾಲೂಕಾ ಆದ್ಯಕ್ಷರಾದ ಮಹಾದೇವಪ್ಪ ತೇಲಿ ಅವರು ಮಾತನಾಡುತ್ತಾ ಕೆರೆ ನೀರು ತುಂಬಿಸುವ ಯೋಜನೆಯಡಿ ಹರಿಸುತ್ತಿರುವ ಮಾರ್ಗದಲ್ಲಿ ಸಾಕಷ್ಟು ಪ್ರಭಾವಿ ಹಾಗೂ ರಾಜಕಾರಣಿಗಳ ಹೆಸರಿನಲ್ಲಿ ಕುತಂತ್ರದಿಂದ ಅಧಿಕಾರಿಗಳಿಗೆ ಹಣದ ಆಮಿಶ್ಯ ಒಡ್ಡಿ, ಹೆದರಿಸಿ ದೊಡ್ಡ ಪೈಪಗಳನ್ನು ಹಾಕಿಕೊಂಡು ನೀರು ಹರೆಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ, ಕೇಳಿದರೆ ಅಧಿಕಾರಿಗಳು ನಮ್ಮಲ್ಲಿ ಸಿಬ್ಬಂದಿ ಇಲ್ಲ, ರೈತರೇ ಬಂದು ಅವುಗಳನ್ನು ತೆಗೆಯಿರಿ ಎಂದು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ, ಆದ್ದರಿಂದ ಇಂತಹ ಅಧಿಕಾರಿಗಳಿಗೂ ಸೂಕ್ತ ಆದೇಶ ನೀಡಿ ಕೆರೆ ನೀರು ತುಂಬುವ ಯೋಜನೆಯನ್ನು ಯಶಸ್ವಿಯನ್ನಾಗಿ ಮಾಡಬೇಕು, ಇದ–ರಿಂದ ಸಾಕಷ್ಟು ಜನ ಜಾನುವಾರುಗಳಿಗೆ ಅನುಕೂಲವಾಗಲಿದೆ. ಎಂದರು.

ಈ ವೇಳೆ ಸಂಗಮೆಶ ಗುದಳೆ ಮಾತನಾಡುತ್ತಾ ಈ ವರ್ಷ ಸಾಕಷ್ಟು ಬಿಸಿಲಿನ ತಾಪಮಾನದಿಂದಾಗಿ ನಾವೆಲ್ಲರೂ ಸಾಕಷ್ಟು ಹೈರಾಣಾಗಿದ್ದೇವೆ, ಜಾನುವಾರುಗಳಿಗೂ ಕೂಡಿಯಲು ನೀರಿನ ಜಲಮೂಲಗಳೆಲ್ಲವೂ ಬತ್ತಿ ಹೋಗಿದ್ದಾವೆ, ಆದ್ದರಿಂದ ಜಿಲ್ಲಾಡಳಿತ ಕೂಡಲೇ ನೀರು ಹರೆಸಿ ಕೆರೆ ತುಂಬಿಸಬೇಕು, ಇಲ್ಲವಾದಲ್ಲಿ ಎಲ್ಲಾ ಮಹಿಳೆಯರು ಹಾಗೂ ಮಕ್ಕಲೊಂದಿಗೆ ಸೇರಿಕೊಂಡು ಆಮರಣ ಉಪವಾಸ ಸತ್ಯಾಗ್ರಹ ಮಾಡಬೇಕಾಗುವುದು ಎಂದು ಎಚ್ಚರಿಸಿದರು.

ಈ ವೇಳೆ ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಜಿಲ್ಲೆಯಲ್ಲಿ 300 ಕೆರೆಗಳು ಇವೆ ಎಲ್ಲವನ್ನು ತುಂಬಿಸಲು ಸಾಧ್ಯವಿಲ್ಲ, ಅದು ಕೆ.ಬಿ.ಜೆ. ಎನ್.ಎಲ್ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಮುಂದಿನ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ, ಸಧ್ಯ ನಿಮ್ಮ ಗ್ರಾಮಗಳಲ್ಲಿ ಜಾನುವಾರುಗಳಿಗೆ ಕುಡಿಯಲು ನೀರಿನ ಸಮಸ್ಯೆಗಳಿದ್ದರೆ ಟ್ಯಾಂಕರಿನ ವ್ಯವಸ್ಥೆ ಮಾಡುತ್ತೇವೆ, ಎಂದರು, ಇದಕ್ಕೆ ವಿರೋಧ್ದ ವ್ಯಕ್ತ ಪಡಿಸಿದ ರೈತರಿಗೆ ಒಂದಿಷ್ಟು ಸಮಯ ತೆಗೆದು–ಕೊಂಡು ನಂತರ ಹೆಚ್ಚುವರಿ ಇನ್ನು 7 ದಿನಗಳವರೆಗೆ ನೀರು ಬಿಡಲಾಗುವುದು ಹಾಗೂ ನೀರನ್ನು ಮಾರ್ಗಮಧ್ಯದಲ್ಲಿ ಅಕ್ರಮವಾಗಿ ತೆಗೆದುಕೊಳ್ಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ ನಂತರ, ಅಧಿಕೃತ ಬರವಣಿಗೆಯಲ್ಲಿ ನೀಡಿದ ನಂತರ ಹೋರಾಟವನ್ನು ಹಿಂಪಡೆಯಲಾಯಿತು.

ಈ ವೇಳೆ ರೈತ ಸಂಘದ ತಾ.ಉಪಾಧ್ಯಕ್ಷರಾದ ಪ್ರಕಾಶ ತೇಲಿ, ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ಗೋಡೆಕರ, ರಾಮನಗೌಡ ಪಾಟೀಲ, ಮಹಾಂತೇಶ ಮಮದಾಪುರ, ಕಲ್ಲಪ್ಪ ಪಾರಶೆಟ್ಟಿ, ಜಂಬಗಿ ಗ್ರಾ.ಪಂ ಅಧ್ಯಕ್ಷರಾದ ಶ್ರೀಶೈಲ ಮಸೂತಿ, ಗುರಪ್ಪ ಸೋಂಪುರ,

ಚಂದ್ರಶೇಖರ ಕೋಣಸಿರಸಗಿ, ಸಂತೋಷ ಮುಡಗಿ, ಪ್ರಭು ಕಾರಜೋಳ, ಸಂಗಪ್ಪ ಕೋಣಸಿರಸಗಿ, ಶ್ರೀಶೈಲ ಸಾಲಿ, ಮಲ್ಲಿಕಾರ್ಜುನ ಕೋಣಸಿರಸಗಿ, ರಾಮಸಿಂಗ ರಜಪೂತ, ಹಣಮಂತ ವಾಲಿಕಾರ, ಚನ್ನಪ್ಪ ವಾಡೇದ,

ಚನ್ನಪ್ಪ ತೇಲಿ, ಹಣಮಂತ ರಜಪೂತ, ಬಸವಂತ ತೇಲಿ, ಪ್ರಕಾಶ ತಳವಾರ, ಜಯಸಿಂಗ ರಜಪೂತ, ಸಾಯಬಣ್ಣ ಸಮಗೊಂಡ , ಬಸವರಾಜ ಮಸಳಿ

# ಕಾಲೇಜುಗಳಲ್ಲಿ ರೋಸ್ಟರ ಪ್ರಕಾರ ಪ್ರವೇಶ ಮಾಡಿಕೊಂಡ ವಿವರ ಪ್ರದರ್ಶಿಸುವಂತೆ ದಲಿತ ವಿದ್ಯಾರ್ಥಿ ಪರಿಷತ್ ಆಗ್ರಹ



**ವಿಜಯಪುರ:**2024–25ನೇಶೈಕ್ಷಣಿಕಸಾಲಿನಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿಯುಸಿ ತರಗತಿಗಳಿಗೆ ಪ್ರವೇಶ ಪ್ರಾರಂಭವಾಗಿದ್ದು, ಬಹುತೇಕ ಖಾಸಗಿ ಅನುದಾನರಹಿತ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಪಡೆದ ಬಗ್ಗೆ ಯಾವುದೇ ಮಾಹಿತಿಯನ್ನು ಪ್ರದರ್ಶನ ಮಾಡದೇ ಈಗಾಗಲೇ ಪ್ರವೇಶ ಮುಕ್ತಾಯವಾಗಿವೆ,ಸೀಟ್‌ಭರ್ತಿಯಾಗಿವೆಎಂಬಸಿದ್ದ ಉತ್ತರವನ್ನುಶಿಕ್ಷಣಸಂಸ್ಥೆಗಳುನೀಡುತ್ತಿದ್ದು,ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಅನುಭವಿಸುವಂತಾಗಿದೆ ಎಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಘಟಕ ಆಕ್ರೋಶ ವ್ಯಕ್ತಪಡಿಸಿದೆ.

ಕೆಲ ಖಾಸಗಿ ಶಿಕ್ಷಣ ಸಂಸ್ಥೆಗಳು ಇಲಾಖೆಯ ಸುತ್ತೋಲೆಯ ಪ್ರಕಾರ ಪ್ರವೇಶ ಪ್ರಕ್ರಿಯೆ ನಡೆಸದೆ ಶಿಕ್ಷಣವನ್ನು ವ್ಯಾಪಾರೀಕರಣ ಮಡಿಕೊಂಡಂತೆ ವರ್ತಿಸುತ್ತಿದ್ದಾರೆ. ಇಲಾಖೆಯ ನಿಯಮಾನುಸಾರ ರೋಸ್ಟರ್ ಪಾಲಿಸದೆ. ನಿಯಮ ಮೀರಿ ಬೇಕಾಬಿಟ್ಟಿಯಾಗಿ ಡೊನೇಷನ್ ಹೆಸರಿನಲ್ಲಿ ಹಣ ಸುಲಿಗೆ ಮಾಡುತ್ತಿದ್ದಾರೆ. ಇದರಿಂದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ, ಸಾಮಾನ್ಯ ವರ್ಗಗಳ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಘಟಕ ಮುಖಂಡರೊಳಗೊಂಡು ನಿಯೋಗವು ಇಂದು ಜಿಲ್ಲಾ ಉಪನಿರ್ದೇಶಕರು ಶಾಲ ಶಿಕ್ಷಣ ಇಲಾಖೆ (ಪದವಿ ಪೂರ್ವ) ಅಧಿಕಾರಿಗಳಿಗೆ ಭೇಟಿ ಆಗ್ರಹಿಸಿದೆ. ನಿಯೋಗವು, ಈ ವಿಷಯವನ್ನು ಗಂಬೀರವಾಗಿ ಪರಿಗಣಿಸಿ ಜಿಲ್ಲೆಯ ಎಲ್ಲ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಿಗೆ ಕಟ್ಟುನಿಟ್ಟಿನಸುತ್ತೋಲೆಯನ್ನುಹೊರಡಿಸುವಮೂಲಕ ಸೂಕ್ತ ಕ್ರಮಕೈಗೊಳ್ಳಲು ಜಿಲ್ಲಾ ಉಪನಿರ್ದೇಶಕರು ಶಾಲ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರಿಗೆ ಮನವಿ ನೀಡಿ ಆಗ್ರಹಿಸಲಾಗಿದೆ.

ಈ ವೇಳೆ ಜಿಲ್ಲಾ ಸಂಚಾಲಕ ಅಕ್ಷಯ್ ಕುಮಾರ್ ಅಜಮನಿ, ಮುಖಂಡರಾದ ಆನಂದ ಮುದೂರ, ಮಾದೇಶ ಛಲವಾದಿ, ಯಾಶಿನ್ ಇನಾಮದಾರ, ಯುವರಾಜ್ ಓಲೇಕಾರ್, ಶಂಕರ್, ಅಜಯ್ ರಾಥೋಡ್, ಮಹಾಂತೇಶ್ ಛಲವಾದಿ, ಯಮನುರಿ ಮಾದರ್, ಮುಂತಾದವರು ಉಪಸ್ಥಿತರಿದ್ದರು.

# ರೈತರ ಪರಿಹಾರ ಹಣ ಸಾಲಕ್ಕೆ ಕಡಿತಗೊಳಿಸಿದ್ದರೆ ಮರುಪಾವತಿಸಲು ಬ್ಯಾಂಕ್‌ಗಳಿಗೆ ಸೂಚನೆ: ಜಿಲ್ಲಾಧಿಕಾರಿ ಟಿ. ಭೂಬಾಲನ್

**ವಿಜಯಪುರ :** ರೈತರ ಪರಿಹಾರದ ಹಣವನ್ನು ಸಾಲದ ಖಾತೆಗೆ ಜಮೆ ಮಾಡಿಕೊಂಡಿರುವ ಬಗ್ಗೆ ದೂರುಗಳು ಬಂದಿರುವುದರಿಂದ ತಕ್ಷಣ ಮರುಪಾವತಿಸುವಂತೆ ಜಿಲ್ಲೆಯ ಎಲ್ಲಾ ಬ್ಯಾಂಕ್‌ಗಳಿಗೆ ಜಿಲ್ಲಾಧಿಕಾರಿ ಟಿ. ಭೂಬಾಲನ್ ಸೂಚಿಸಿದ್ದಾರೆ.

ಈ ಕುರಿತು ಪ್ರಕಟಣೆ ಬಿಡುಗಡೆ ಮಾಡಿದ ಅವರು, ಕರ್ನಾಟಕ ಸರ್ಕಾರ ಜಿಲ್ಲೆಯ ರೈತರಿಗೆ ಬರ ಪರಿಹಾರವಾಗಿ 36010.20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, ಇದು ರೈತರ ಬರ ಪರಿಹಾರ ಹಣವಾಗಿರುತ್ತದೆ. ರಾಜ್ಯ ಸರ್ಕಾರದಿಂದ ನೇರವಾಗಿ ರೈತರ ಖಾತೆಗಳಿಗೆ ಬರ ಪರಿಹಾರದ ಹಣ ಬಿಡುಗಡೆ ಮಾಡಿದೆ. ಇದನ್ನು ರೈತರ ಸಾಲದ ಖಾತೆಗೆ ಜಮೆ ಮಾಡಿಕೊಳ್ಳಬಾರದು ಎಂದು ಲೀಡ್ ಬ್ಯಾಂಕ್ ವ್ಯವಸ್ಥಾಪಕರು ಹಾಗೂ ವಿಜಯಪುರ ಸಹಕಾರ ಸಂಘಳ ಇಲಾಖೆಯ ಉಪ ನಿಬಂಧಕರಿಗೆ ಸೂಚಿಸಲಾಗಿದೆ. ಆದಾಗ್ಯೂ ಸಾಲದ ಖಾತೆಗಳಿಗೆ ಪರಿಹಾರದ ಹಣ ಜಮೆ ಮಾಡಿಕೊಂಡಿರುವುದು ಕಂಡು ಬಂದಿದೆ. ಹಾಗಾಗಿ ಕಡಿತಗೊಳಿಸಿದ ಹಣವನ್ನು ತಕ್ಷಣ ಮರುಪಾವತಿಸಬೇಕು. ಇಲ್ಲದಿದ್ದಲ್ಲಿ ಬ್ಯಾಂಕ್‌ಗಳ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ–2005ರನ್ವಯ ಮತ್ತು ಇತರ ಕಾಯ್ದೆಯಡಿಯಲ್ಲಿ ಕ್ರಮ ಜರಗಿಸಲಾಗುವು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರ ಸಹಮತ ಪಡೆಯದೇ ಅವರ ಬರ ಪರಿಹಾರ ಹಣವನ್ನು ಅವರ ಸಾಲದ ಖಾತೆಗೆ ಜಮೆ ಮಾಡಿಕೊಂಡರೆ ಆಯಾ ಬ್ಯಾಂಕ್ ಮುಖ್ಯಸ್ಥರನ್ನು ಮತ್ತು ಶಾಖಾ ವ್ಯವಸ್ಥಾಪಕರನ್ನು ಜವಾಬ್ದಾರನ್ನಾಸಿ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು. ಸರಕಾರದಿಂದ ಬಿಡುಗಡೆಯಾದ ಯಾವುದೇ ತರಹದ ಪ್ರೋತ್ಸಾಹದ ಧನವನ್ನು ಸಾಲದ ಖಾತೆಗೆ ಹೊಂದಾಣಿಕೆ ಮಾಡದೆ ಗ್ರಾಹಕರ ಅನುಕೂಲ ಮಾಡಿಕೊಡಬೇಕು. ಹಾಗೂ ಅವರ ಜೊತೆ ಸಂಯಮದಿಂದ ವರ್ತಿಸಬೇಕು. ತಾಂತ್ರಿಕ ಸಮಸ್ಯೆ ಇದ್ದರೆ ಗ್ರಾಹಕರಿಗೆ ಸರಿಯಾದ ತಿಳುವಳಿಕೆ ನೀಡಿ ಮಾರ್ಗದರ್ಶನ ಮಾಡಬೇಕು ಮತ್ತು ಅವರ ಸಮಸ್ಯೆಯನ್ನು ಬೇಗನೆ ಪರಿಹರಿಸಬೇಕು ಎಂದು ಸೂಚಿಸಿದ್ದಾರೆ.

# ಉ.ಕ.ದಲ್ಲಿ ಮೊದಲ ಬಾರಿಗೆ ಡಿಪ್ಲೋಮಾ ಇನ್ ಆರ್ಟಿಫೀಷಿಯಲ್ ಇಂಟಲಿಜೆನ್ಸಿ ಆ್ಯಂಡ್ ಮಷಿನ್ ಲರ್ನಿಂಗ್ ಕೋರ್ಸ



**ಬೆಳಗಾವಿ :** ವಿಧ್ಯಾರ್ಥಿಗಳನ್ನು ತಾಂತ್ರಿಕವಾಗಿ ಔದ್ಯೋಗಿಕ ಜಗತ್ತಿಗೆ ಸಜ್ಜುಗೊಳಿಸುತ್ತಿರುವ ಬೆಳಗಾವಿಯ ಉದ್ಯಮಬಾಗದಲ್ಲಿರುವ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ(ಜಿಟಿಟಿಸಿ)ಯಲ್ಲಿ ಪ್ರಥಮ ಬಾರಿಗೆ ಡಿಪ್ಲೋಮಾ ಇನ್ ಆರ್ಟಿಫಿಸಿಯಲ್ ಇಂಟಲಿಜೆನ್ಸಿ ಆಂಡ ಮಷಿನ್ ಲರ್ನಿಂಗ್ ಕೋರ್ಸಗಳನ್ನು ಪ್ರಸಕ್ತ ಸಾಲಿನಿಂದ ಪ್ರಾರಂಭಿಸಲಾಗುತ್ತಿದೆ ಎಂದು ಬೆಳಗಾವಿ ಜಿಟಿಟಿಸಿಯ ಪ್ರಾಂಶುಪಾಲರಾದ ಬಿ.ಜಿ. ಮೋಗೇರ ಅವರು ತಿಳಿಸಿದರು.

ನಗರದ ವಾರ್ತಾ ಭವನದಲ್ಲಿ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಇಂದಿನ ದಿನಮಾನಗಳಲ್ಲಿ ತಂತ್ರಜ್ಞಾನಕ್ಕೆ ಬಹು ಬೇಡಿಕೆ ಇದ್ದು ಇದಕ್ಕೆ ಅನುಗುಣವಾಗಿ ಇಂದಿನ ಯುವಪೀಳಿಗೆ ತಂತ್ರಜ್ಞಾನವನ್ನು ಹೊಂದಬೇಕು ಎನ್ನುವ ಉದ್ದೇಶದಿಂದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಕೈಗಾರಿಕಾ ವಸಾಹತು ಉದ್ಯಮ ಭಾಗದಲ್ಲಿ ವಿವಿಧ ಡಿಪ್ಲೋಮಾ ಕೋಸ್‌ಗಳಿಗೆ ಪ್ರವೇಶ ಆರಂಬಿಸಲಾಗಿರುತ್ತದೆ ಎಂದರು.

ಉತ್ತರ ಕರ್ನಾಟಕದಲ್ಲಿ ಮೊದಲ ಬಾರಿಗೆ ಡಿಪ್ಲೋಮಾ ಇನ್ ಆರ್ಟಿಫೀಷಿಯಲ್ ಇಂಟಲಿಜೆನ್ಸಿ ಆ್ಯಂಡ್ ಮಷಿನ್ ಲರ್ನಿಂಗ್ ಕೋರ್ಸನ್ನು ಪ್ರಾರಂಭಿಸಲಾಗಿದ್ದು ಇದರ ಜೊತೆಗೆ ಡಿಪ್ಲೋಮಾ ಇನ್ ಆಟೋಮೆಷನ್ ಆ್ಯಂಡ್ ರೊಬೋಟಿಕ್ಸ್ ಡಿಪ್ಲೋಮಾ ಇನ್ ಟೂನ್ ಆ್ಯಂಡ್ ಡೈ ಮೇಂಕಿಂಗ್, ಡಿಪ್ಲೋಮಾ ಇನ್ ಪ್ರಿಸಿಷನ್ ಆ್ಯಂಡ್ ಮ್ಯಾನ್ಯುಫ್ಯಾಕ್ಚರಿಂಗ್ ಪೂರ್ಣಾವಧಿ ತರಬೇತಿಯ ಸದುಪಯೋಗ ಪಡೆದುಕೊಳ್ಳಲು ವಿಧ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಪ್ರಸಕ್ತ ಸಾಲಿನ ಡಿಪ್ಲೋಮಾ ತರಬೇತಿಗಳಿಗೆ ಆಸಕ್ತ ವಿಧ್ಯಾರ್ಥಿಗಳು ಅರ್ಜಿಗಳನ್ನು ಆನಲೈನ್ ಮೂಲಕ ಇದೇ ಮೇ 27 ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಬೆಳಗಾವಿ ಜಿಟಿಟಿಸಿ ಪ್ರಾಂಶುಪಾಲರು, ಮೊಬೈಲ್ ಸಂಖ್ಯೆ 9141630309 ಅಥವಾ 0831–2950611ಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

# ವಿಜೃಂಬಣೆಯಿಂದ ಜರುಗಿದ ಶ್ರೀ ವಾಸವಿದೇವಿಯ ಜಯಂತ್ಯೋತ್ಸವ



**ತಾಳಿಕೋಟೆ :** ಪಟ್ಟಣದ ಆರ್ಯ ವೈಶ್ಯ ಸಮಾಜ ಬಾಂದವರ ಕುಲದೇವರಾದ ಶ್ರೀ ವಾಸವಿದೇವಿಯ ಜಯಂತ್ಯೋತ್ಸವವು ಶನಿವಾರರಂದು ವಿಜೃಂಬಣೆಯಿಂದ ಜರುಗಿತು.

ಜಯಂತ್ಯೋತ್ಸವ ಅಂಗವಾಗಿ ಬೆಳಿಗ್ಗೆ 9 ಗಂಟೆ–ಗೆ ಭಜಾರ ಶ್ರೀ ಅಂಬಾಭವಾನಿ ಮಂದಿರದಿಂದ ಸುಮಂಗಲೆಯರ ಕುಂಭ ಮೇಳದ ಮೆರವಣಿಗೆಯು ಪ್ರಾರಂಭಗೊಂಡು ಕತ್ರಿ ಭಜಾರ ಮಾರ್ಗವಾಗಿ ಶ್ರೀ ವಾಸವಿ ದೇವಸ್ಥಾನಕ್ಕೆ ತಲುಪಿತು.


ನಂತರ ಶ್ರೀ ವಾಸವಿದೇವಿಯ ಮಹಾ ಮೂರ್ತಿಗೆ ಮಹಾಭಿಷೇಕ, ಕುಂಕುಮಾರ್ಚನೆ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಹಾ ಮಂಗಳಾರತಿ ಕಾರ್ಯಕ್ರಮಗಳು ಜರುಗಿದವಲ್ಲದೇ ನಂತರ ಸಮಸ್ತ ಭಕ್ತಾಧಿಗಳಿಗೆ ಮಹಾ ಪ್ರಸಾದ ವಿತರಿಸಲಾಯಿತು.

ಜಯಂತ್ಯೋತ್ಸವ ಅಂಗವಾಗಿ ಸಾಯಂಕಾಲ ಸಮಾಜದ ಮಕ್ಕಳಿಂದ ಮನರಂಜನೆ ಕಾರ್ಯಕ್ರಮಗಳು ಜರುಗಿದವು.

ಈ ಜಯಂತ್ಯೋತ್ಸವದ ನೇತೃತ್ವವನ್ನು ಆರ್ಯ ವೈಶ್ಯ ಸಮಾಜದ ಅಧ್ಯಕ್ಷ ರವಿ ತಾಳಪಲ್ಲೆ, ವಾಸವಿ ಮಹಿಳಾ ಮಂಡಳದ ಅಧ್ಯಕ್ಷ ಸಾವಿತ್ರಿ ವಾಸುದೇವ ಹೆಬಸೂರ,

ಅಶೋಕ ಶೆಟ್ಟಿ, ಶ್ರೀಕಾಂತ ಶೆಟ್ಟಿ, ಯಂಕಣ್ಣ ತಾಳಪಲ್ಲೆ, ಸತ್ಯನಾರಾಯಣ ತಾಳಪಲ್ಲೆ, ಭೀಮಣ್ಣ ಅಗಡಿ, ದತ್ತಾತ್ರೇಯ ಹೆಬಸೂರ, ವಿದ್ಯಾಧರ ಗೊಟಗುಣಕಿ, ಗುರು ತಾಳಪಲ್ಲೆ, ಬದ್ರಿನಾರಾಯಣ ಕನಕಗಿರಿ, ಪ್ರಶಾಂತ ಜನಾದ್ರಿ, ಮಂಜು ಶೆಟ್ಟಿ, ಸಂಗಮನಾಥ ಶೆಟ್ಟಿ, ಸಂದೀಪ ಶೆಟ್ಟಿ, ಸುರಜ ಶೆಟ್ಟಿ, ವಾಸು ಮಾನ್ವಿ, ಮುರಳಿಧರ ಮಾನ್ವಿ, ಕೃಷ್ಣಾ ಕನಕಗಿರಿ, ಮಹಿಳಾ ಮಂಡಳದ ಗೀತಾ ತಾಳಪಲ್ಲೆ, ಸುಭದ್ರಾ ಹೆಬಸೂರ, ಸುಲೋಚನಾ ಶೆಟ್ಟಿ, ವಂದನಾ ಶೆಟ್ಟಿ, ರಾಜಲಕ್ಷ್ಮೀ ಮಾನ್ವಿ, ರಮಾ ತಾಳಪಲ್ಲೆ, ಉಷಾ ಮಾನ್ವಿ, ಶೀಲಾಬಾಯಿ ತಾಳಪಲ್ಲೆ, ಕವಿತಾ ಜನಾದ್ರಿ, ಐಶ್ವರ್ಯ ಗೊಟಗುಣಕಿ, ಮೊದಲಾದವರು ವಹಿಸಿದ್ದರು.

# ಆದರ್ಶ ಶಾಲೆಗೆ ಸಮೀಕ್ಷಾ ಇಮಲಾಪುರ ಆಯ್ಕೆ



**ಕಲಕೇರಿ :** ಸ್ಥಳೀಯ ಎಸ್.ಎಮ್.ವ್ಹಿ.ವ್ಹಿ. ಸಂಘದ ಶ್ರೀ ಬಸವೇಶ್ವರ ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿರುವ ಕುಮಾರಿ ಸಮೀಕ್ಷಾ ಶಿ ಇಮಲಾಪುರ 2023–24 ನೇ ಸಾಲಿನ ಆದರ್ಶ ಮಹಾವಿದ್ಯಾಲಯದ ಪರೀಕ್ಷೆ ಬರೆದು ಆದರ್ಶ ಶಾಲೆಗೆ ಆಯ್ಕೆಯಾಗಿದ್ದಾಳೆ, ಈ ವಿದ್ಯಾರ್ಥಿನಿಗೆ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಮುಖ್ಯಗುರುಗಳು ಅಭಿನಂದನೆ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಭಾಗ್ಯನಗರ ಪಟ್ಟಣ ಪಂಚಾಯತ: ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ಭಾಗ್ಯನಗರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ನಗರೋತ್ಥಾನ ಹಂತ–4 ರ ಯೋಜನೆಯಡಿಯಲ್ಲಿ ಯೋಜನೆಗೆ ವ್ಯಕ್ತಿಗತ ಫಲಾನುಭವಿಗಳಿಗೆ ಶೇ.24.10 ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಶೇ.7.25 ಇತರೆ ಬಡಜನರ ಕಲ್ಯಾಣ ಕಾರ್ಯಕ್ರಮ ಹಾಗೂ ಶೇ.5 ವಿಕಲಚೇತನರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಗಳಿಗೆ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವ್ಯೆಯಕ್ತಿಕ ನೀರಿನ ನಳ ಸಂಪರ್ಕ, ಪಕ್ಕಾ ಮನೆ, ವ್ಯೆಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಸಹಾಯಧನ ಹಾಗೂ ವಾರ್ಷಿಕ ವಿಮೆ ಸಿಂಗಲ್ ಪ್ರೀಮಿಯಮ್ ಸೌಲಭ್ಯ ಹಾಗೂ ಇತರೆ ಬಡಜನರಿಗಾಗಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಸಹಾಯಧನ, ವಿಕಲಚೇತನರಿಗಾಗಿ ಪಕ್ಕಾ ಮನೆ ನಿರ್ಮಾಣಕ್ಕಾಗಿ ಸಹಾಯಧನ, ಆರೋಗ್ಯ ತಪಾಸಣೆ, ಪೂರಕ ಪರಿಕರಗಳನ್ನು ಖರೀದಿಸಿ ಒದಗಿಸುವ ಕಾರ್ಯಕ್ರಮಗಳಿಗೆ ಅರ್ಹ ಫಲಾನುಭವಿಗಳಿಂದ ದಿನಾಂಕ: 18–09–2023 ರಂದು ಅರ್ಜಿ ಆಹ್ವಾನಿಸಲಾಗಿತ್ತು. ಗುರಿಗೆ ತಕ್ಕಂತೆ ಅರ್ಜಿ ಸ್ವೀಕೃತವಾಗಿರದ ಕಾರಣ ಮರು ಪ್ರಕಟಣೆಯನ್ನು ಹೊರಡಿಸಿದ್ದು ಅರ್ಹ ಫಲಾನುಭವಿಗಳು ಮೇ 31 ರೊಳಗೆ ಕಛೇರಿ ವೇಳೆಯ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿ

# ತಾಯಿ ದೇವರಾಗಬಹುದು: ಶಿಕ್ಷಕಿ ನಾಡಗೌಡ



**ತಾಳಿಕೋಟೆ :** ನಮ್ಮ ಭಾರತೀಯ ಸಂಸ್ಕೃತಿ ಒಳ್ಳೆಯ ಸಂಸ್ಕೃತಿಯಾಗಿದ್ದು ಅಂತಹ ಸಂಸ್ಕೃತಿಯನ್ನು ಅಳವಡಿಸಿಕೊಂಡು ಸಾಗಿದರೆ ಜೀವನ ಸಾರ್ಥಕವಾಗಲಿದೆ ಎಂದು ಸಮಿಪದ ಬಳಗಾನೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕಿ ಶ್ರೀಮತಿ ಮಡಿವಾಳಮ್ಮ ನಾಡಗೌಡ ಅವರು ನುಡಿದರು.

ಸ್ಥಳೀಯ ಸ್ಪೂರ್ತಿ ಕೋಚಿಂಗ್ ಕ್ಲಾಸ್ ವತಿಯಿಂದ ಬೇಸಗಿ ತರಬೇತಿ ಶಿಬಿರ ಹಾಗೂ ತಾಯಂದಿರರ ದಿನಾಚರಣೆ ಅಂಗವಾಗಿ ಏರ್ಪಡಿಸಲಾದ ಅಮ್ಮನಿಗೊಂದು ನಮನ ಎಂಬ ತಾಯಂದಿರರ ಪಾದಪೂಜಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ತಾಯಿ ಅನ್ನುವ ಪದ ಬಹಳೇ ಶ್ರೇಷ್ಠವಾಗಿದೆ ತಾಯಿ ದೇವರಾಗಬಹುದು ಆದರೆ ದೇವರು ತಾಯಿಯಾಗಲು ಸಾಧ್ಯವಿಲ್ಲಾವೆಂದರು.

ಅಂತಹ ಭಾರತೀಯ ಪರಂಪರೆಯಿಂದ ನಡೆದು ಬಂದಂತಹ ನಮ್ಮ ತಾಯಂದಿರರು ಆಗಿದ್ದಾರೆಂದು ಹೇಳಿದ ಶ್ರೀಮತಿ ನಾಡಗೌಡ ಅವರು ಇಂದಿನ ಮೊಬೈಲ್ ಸಂಸ್ಕೃತಿಯಿಂದ ಒಳ್ಳೆಯ ಸಂಸ್ಕಾರವೆಂಬುದು ಕಡಿಮೆಯಾಗುತ್ತಾ ಸಾಗಿದೆ ಕಾರಣ ಒಳ್ಳೆಯ ಸಂಸ್ಕಾರ ಬೆಳೆಸುವ ನಿಟ್ಟಿನಲ್ಲಿ ಸಾಗಬೇಕೆಂದರು.

ಅಂತಹ ಸಂಸ್ಕಾರ ಈ ಒಂದು ಸ್ಪೂರ್ತಿ ಸಂಸ್ಥೆಯಡಿಯಲ್ಲಿ ನಡೆಯುತ್ತಾ ಸಾಗಿಬಂದಿದೆ ಯಾವುದೇ ಒಂದು ಶಿಕ್ಷಣ ಸಂಸ್ಥೆ ಬೆಳೆಯಬೇಕಾದರೆ ಅಲ್ಲಿಯ ಆಡಳಿತ ಮಂಡಳಿಯವರು ಹಾಗೂ ಮಕ್ಕಳು ಅಗತ್ಯವಾಗಿದ್ದಾರೆ ಉತ್ತಮ ವಿದ್ಯಾರ್ಥಿಗಳು ಹಾಗೂ ಉತ್ತಮ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ತಮ್ಮ ಶಾಲೆಯಲ್ಲಿ ನಡೆಸಿಕೊಂಡು ಬಂದಂತಹ ಸ್ಥಿತಿಗತಿ ಕುರಿತು ವಿವರಿಸಿದ ಅವರು ತಾವು ರಚಿಸಿದ ಕವನ ಸಂಕಲನದ ಪುಸ್ತಕ ಬಿಡುಗಡೆ ಮಾಡಿದ್ದರ ಕುರಿತು ತಾಯಂದಿರರ ಕುರಿತು ರಚಿಸಿದ ಕವನವನ್ನು ವಾಚಿಸಿ ಪ್ರೀತಿ ಎಂಬುದು ಜೀವನದ ಮೊದಲನೇಯ ಪುಟವಾಗಿದೆ ಸಾವು ಎಂಬುದು ಜೀವನದ ಕೊನೆಯ ಪುಟವಾಗಿದ್ದು ಈ ಎರಡರ ನಡುವೆ ಒಳ್ಳೆಯ ಸಂಸ್ಕಾರವಂತರಾಗಿ ಬಾಳಿ ಬೆಳಗಬೇಕೆಂದರು.

ಇನ್ನೋರ್ವ ಅತಿಥಿ ಬಾಪುಜಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಸೀಮಾ ಚವ್ಹಾಣ ಅವರು ಮಾತನಾಡಿ ತಂದೆ ತಾಯಿ ಇಲ್ಲದ ಮಕ್ಕಳ ಜೀವನ ಬಹಳೇ ತೊಂದರೆಗೀಡಾಗುವಂತಹದ್ದಾಗಿದೆ ಅಂತಹ ಮಕ್ಕಳ ಭವಿಷ್ಯ ಪೂರ್ಣಗೊಳ್ಳಲು ಸಾಧ್ಯವಿಲ್ಲಾವೆಂದ ಅವರು ತಾಯಿ ಯಾದವಳಿಗೆ ದೇವತೆಯ ಸ್ಥಾನಮಾನ ನೀಡಲಾಗಿದೆ ತಂದೆಯಾದವ ಕಾವಲುಗಾರನಂತೆ ಕಾರ್ಯ ನಿರ್ವಹಿಸುತ್ತಾ ಇಡೀ ಮನೆತನವನ್ನೇ ರಕ್ಷಣೆಯತ್ತ ಕೊಂಡೊಯುತ್ತಾನೆಂದು ಪಾಲಕ, ಬಾಲಕ, ಶಿಕ್ಷಕ, ಇವೆಲ್ಲವು ಒಳ್ಳೆಯವರಿದ್ದಾಗ ಶಿಕ್ಷಣವೆಂಬುದು ಸದೃಡಗೊಳ್ಳಲು ಸಾಧ್ಯವೆಂದರು.

ಇನ್ನೋರ್ವ ಅತಿಥಿ ಚಿಕ್ಕಮಕ್ಕಳ ತಜ್ಞವೈಧ್ಯರಾದ ಡಾ.ಆಯ್.ಬಿ.ತಳ್ಳೊಳ್ಳಿ ಅವರು ಮಾತನಾಡಿ ಮದರಿಯವರು ತಮ್ಮ ಪರಿಶ್ರಮದಿಂದ ಈ ಒಂದು ಶಿಕ್ಷಣ ಸಂಸ್ಥೆಯನ್ನು ನಡೆಸಿಕೊಂಡು ಸಾಗಿದ್ದಾ–ರೆ ಮಕ್ಕಳಿಗೆ ಒಳ್ಳೆಯ ಜ್ಞಾನ ಒಳ್ಳೆಯ ವಿಚಾರ ಮೂಡಿಬರಲಿ ಎಂಬ ಉದ್ದೇಶ ಕಳೆದ 2 ತಿಂಗಳಿಂದ ಶಾಲೆಗಳಿಗೆ ನೀಡಿದ ಬಿಡುವಿನಲ್ಲಿ ತಮ್ಮ ಸೇವಾ ಕಾರ್ಯ ಮುಂದುವರೆಸಿ ಮಕ್ಕಳಿಗೆ ಸನ್ಮಾರ್ಗ ತೋರಿಸಿರುವದು ಅತೀ ಮಹತ್ವದ ಕಾರ್ಯ ಇದಾಗಿದೆ ಎಂದು ನಮ್ಮ ಭಾರತೀಯ ಸಂಸ್ಕೃತಿ ಎಂಬುದು ಹಿಂದಿನಿಂದಲೂ ಸಾಗಿಬಂದಿದ್ದನ್ನು ಮರೆಯಬಾರದು ಇಂದು ಹಮ್ಮಿಕೊಂಡಂತಹ ತಾಯಿಯ ಪಾದ ಪೂಜೆ ಈ ಕಾರ್ಯಕ್ರಮ ಸಂತಸ ತಂದಿದೆ ಆಟದ ಜೊತೆ ಪಾಠ, ದೇವರ ಮೇಲೆ ಭಯ ಭಕ್ತಿ ಕುರಿತು ಪಾಲಕರು ಮತ್ತು ಶಿಕ್ಷಕರು ನೀಡುವ ಕಾರ್ಯವಾಗಬೇಕು ತಂದೆ ತಾಯಿಯಿಂದಲೇ ಸಂಸ್ಕಾರವಾಗಿದೆ ಸಂಸ್ಕಾರವೆಂಬುದು ಎಲ್ಲಿ ಹುಡುಕಿದರು ಸಿಗುವಂತಹದ್ದಲ್ಲಾ ತಂದೆ ತಾಯಿಯಲ್ಲಿ ಮಾತ್ರ ದೊರೆಯುತ್ತದೆ ಎಂದರು.

ಇನ್ನೋರ್ವ ಶಿಕ್ಷಕ ಅಶೋಕ ಹಂಚಲಿ ಅವರು ಮಾತನಾಡಿ ತಾಯಂದಿರ ಸಂಸ್ಕಾರವೆಂಬುದು ಮಕ್ಕಳಿಗೆ ಸಿಗುವಂತಾಗಬೇಕು ಇಂದಿನ ದಿನಮಾನದಲ್ಲಿ ತಂದೆ ತಾಯಿಯನ್ನು ಕೆಲವರು ಅನಾಥ ಆಶ್ರಮದಲ್ಲಿ ಹಾಕುವಂತಹ ಕಾರ್ಯ ನಡೆಸಿರುವದು ದುಃಖದ ಸಂಗತಿಯಾಗಿದೆ ಇಂದು ತಾಯಿ, ತಂದೆ, ಅಜ್ಜ, ಅಜ್ಜಿ ಅವರನ್ನು ಪ್ರೀತಿಸುವ ಕಾರ್ಯ ಮಾಡುತ್ತಿರುವ ಈ ಶಾಲೆಯಲ್ಲಿ ನಡೆದಿರುವದು ಅತೀವ ಹರ್ಷ ತಂದಿದೆ ಎಂದರು.

ಸಾನಿದ್ಯ ವಹಿಸಿದ ಸ್ಥಳೀಯ ಕೈಲಾಸ ಪೇಠೆಯ ಬಸವಪ್ರಭು ದೇವರು ಆಶಿರ್ವಚನ ನೀಡಿ ತಾಯಂದಿರರಲ್ಲಿಯ ಸಹನ ಗುಣ ಇಂದು ಪಾದ ಪೂಜೆ ಗೈದ ಮಕ್ಕಳಲ್ಲಿ ಬರಲಿ ಎಂದು ಆಶಿಸಿದ ಶ್ರೀಗಳು ಈ ವಿದ್ಯಾ ಸಂಸ್ಥೆಯ ಸೇವಾ ಕಾರ್ಯ ಮೆಚ್ಚುವಂತಹದ್ದಾಗಿದೆ ಇಂದು ಹಮ್ಮಿಕೊಂಡಂತಹ ಕಾರ್ಯಕ್ರಮ ಪ್ರತಿವರ್ಷ ಜರುಗುವಂತಾಗಬೇಕು ಇದ–ರಿಂದ ಮಕ್ಕಳಲ್ಲಿ ತಾಯಂದಿರಲ್ಲಿ ಶಿಕ್ಷಕರಲ್ಲಿ ಪ್ರೋತ್ಸಾಹಿಸುವ ಗುಣ ಹೊರಬರಲಿದೆ ಎಂದರು.

ಅತಿಥಿಗಳಾಗಿ ಆಗಮಿಸಿದ ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ ಅವರು ಹಾಗೂ ಅಧ್ಯಕ್ಷತೆ ವಹಿಸಿದ ಸಿದ್ದಾರೂಡ ಮದರಿ ಅವರು ಸಂಸ್ಥೆಯ ಕಾರ್ಯ ಚಟುವಟಿಕೆಗಳ ಕುರಿತು ವಿವರಿಸಿದರು.

ಇದೇ ಸಮಯದಲ್ಲಿ ಭರತನಾಟ್ಯ ಕಲಾವಿದೆ ಕುಮಾರಿ ಪೃಥ್ವಿ ಹೆಗಡೆ ನೇತೃತ್ವದ ತಂಡದವರು ಭರತನಾಟ್ಯ ಪ್ರದರ್ಶಿಸಿದರು.

ಈ ಕಾರ್ಯಕ್ರಮದಲ್ಲಿ ತಾಯಂದಿರರ ಪಾದ ಪೂಜೆ ಹಾಗೂ ಉಡಿ ತುಂಬುವ ಕಾರ್ಯಕ್ರಮ ನಡೆದವಲ್ಲದೇ ವಿದ್ಯಾರ್ಥಿನಿಯರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಎಸ್.ಎಸ್.ಎಲ್.ಸಿ. ಪರಿಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯ ಮೇಲೆ ಶಂಕರಗೌಡ ಬಿರಾದಾರ, ಕು.ಶ್ವೇತಾ ಯರಗಲ್ಲ, ವಿನೋದ ಹಿರೇಮಠ, ಮೊದಲಾದವರು ಇದ್ದರು.

ಶ್ವೇತಾ ಯರಗಲ್ಲ ಸ್ವಾಗತಿಸಿದರು. ಶಿಕ್ಷಕಿ ಶಿವಲೀಲಾ ನಿರೂಪಿಸಿದರು. ಮಹಾಂತೇಶ ಕುಂಬಾರ ವಂದಿಸಿದರು.

# ಕುಕನೂರು ಐಟಿಐ ಸಂಸ್ಥೆ: ವಿವಿಧ ವೃತ್ತಿಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಕುಕನೂರಿನ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2024–25 ನೇ ಸಾಲಿಗೆ ಮೆರಿಟ್ ಕಂ ರಿಸರ್ವೇಷನ್ ಆಧಾರಿತ ಪ್ರವೇಶ ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ವಿವಿಧ ವೃತ್ತಿಗಳಿಗಳ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ದಿನಾಂಕ:01/08/2024 ರಂತೆ 14 ವರ್ಷ ಮೇಲ್ಪಟ್ಟ ವಯೋಮಿತಿಯು ಕಡ್ಡಾಯವಾಗಿರುತ್ತದೆ. ವೃತ್ತಿಯ ಅನುಸಾರವಾಗಿ 8ನೇ ತರಗತಿ/ಎಸ್.ಎಸ್.ಎಲ್.ಸಿ ಉತ್ತೀರ್ಣರಾದಅರ್ಹಆಸಕ್ತಅಭ್ಯರ್ಥಿಗಳುವಿವಿಧತಾಂತ್ರಿಕ/ತಾಂತ್ರಿಕೇತರ ವೃತ್ತಿಗಳಿಗೆ ರಾಜ್ಯದ ಯಾವುದೇ ಭಾಗದಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂನ್ 03 ಕೊನೆಯ ದಿನವಾಗಿದ್ದು, www.cite.karnataka.gov.in ವೆಬ್‌ಸೈಟ್ ಮೂಲಕ ಅಭ್ಯರ್ಥಿಗಳು ರಾಜ್ಯದ ಯಾವುದೇ ಸರಕಾರಿ/ಅನುದಾನಿತ ಐಟಿಐ ಗಳಲ್ಲಿ ಅಥವಾ ಇಂಟರ್‌ನೆಟ್ ಕೆಫೆ ಅಥವಾ ಸೈಬರ್ ಸೆಂಟರ್‌ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸರಕಾರಿ / ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರನ್ನು, ಮೊ.ಸಂ: 9481718859, 9164198246, 9945789400, 9964247098ಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಾಚಾರ್ಯರಾದ ಚನ್ನಬಸಪ್ಪ ಬಳ್ಳಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ಮಶಾನದ ಸ್ವಚ್ಛತೆಗೆ ಸಾರ್ವಜನಿಕರ ಸಹಕಾರ ಅಗತ್ಯ: ರವಿ ಜವಳಗಿ

**ಮಹಾಲಿಂಗಪುರ :** ಪಟ್ಟಣದ ಹಿಂದೂ ರುದ್ರಭೂಮಿಯ ಸ್ವಚ್ಛತೆಗೆ ಪುರಸಭೆಯ ಜೊತೆಗೆ ಇಲ್ಲಿ ಅಂತ್ಯ ಸಂಸ್ಕಾರ ನಡೆಸುವ ಸಕಲ ಹಿಂದೂ ಸಮಾಜಗಳು ಮತ್ತು ಸಾರ್ವಜನಿಕರ ಸಹಕಾರ ಬಹಳ ಅಗತ್ಯವಿದೆ ಎಂದು ಪುರಸಭೆ ಸದಸ್ಯ ರವಿ ಜವಳಗಿ ಹೇಳಿದರು.



ಶನಿವಾರ ಹಿಂದೂಸಂಘಟನೆಗಳ ವತಿಯಿಂದ ಹಮ್ಮಿಕೊಂಡಿದ್ದ ಹಿಂದೂ ರುದ್ರಭೂಮಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಹಿಂದೂ ರುದ್ರಭೂಮಿಯು ಸುತ್ತಮುತ್ತಲಿನ ಸಾರ್ವಜನಿಕರು ಬಯಲು ಶೌಚಕ್ಕಾಗಿ ಬಳಸುತ್ತಿರುವದರಿಂದ ಇಲ್ಲಿ ಸ್ವಚ್ಛತೆಯು ಮರೀಚಿಕೆಯಾಗಿ, ಇಲ್ಲಿನ ಅವ್ಯವಸ್ಥೆಯನ್ನು ನೋಡಿ, ಅಂತ್ಯಸಂಸ್ಕಾರಕ್ಕೆ ಬಂದವರು ಪುರಸಭೆ ಮತ್ತು ಪಟ್ಟಣದ ಹಿರಿಯರನ್ನು, ಜನಪ್ರತಿನಿಧಿಗಳು ಬೈದು ಹೋಗುವಂತಾಗಿದೆ. ಪುರಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯು ಸ್ವಚ್ಚತೆಗೆ ಹೆಚ್ಚಿನ ಗಮನ ಹರಿಸಬೇಕು. ಜೊತೆಗೆ ಸಾರ್ವಜನಿಕರು ಸಹ ಸ್ಮಶಾನದಲ್ಲಿ ಬಯಲು ಶೌಚಕ್ಕೆ ಬರುವದನ್ನು ನಿಲ್ಲಿಸಿ ಸಹಕಾರ ನೀಡಿದಾಗ ಮಾತ್ರ ನಿರಂತರವಾಗಿ ಹಿಂದೂರುದ್ರಭೂಮಿಯ ಸ್ವಚ್ಛತೆ ಕಾಪಾಡಲು ಸಾಧ್ಯವಾಗುತ್ತದೆ ಎಂದರು.

ಮುಂಜಾನೆ 6 ರಿಂದ 9ಗಂಟೆಯವರೆಗೆ ಹಿಂದೂ ಸಂಘಟನೆಗಳ ಯುವಕರು ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾಗಿ ಶ್ರಮದಾನ ಮಾಡಿದರು. ಪುರಸಭೆಯ ಹಿರಿಯ ಆರೋಗ್ಯ ನಿರೀಕ್ಷಕ ಎಂ.ಎಂ.ಮುಗಳಖೋಡ ಸ್ಮಶಾನಕ್ಕೆ ಭೇಟಿ ಪುರಸಭೆಯ ಸಿಬ್ಬಂದಿಯಿಂದ ಅಲ್ಲಿನ ಚರಂಡಿ ಸ್ವಚ್ಛತೆ ಮಾಡಿಸಿದರು.

ಅಭಿಷೇಕ ಲಮಾಣಿ, ಶಿವಾನಂದ ಕಲ್ಮಡಿ, ಹಣಮಂತ ನಾವ್ಹಿ, ಆನಂದ ಬಂಡಿಗಣಿ, ರಾಘು ಪವಾರ, ದಾನೇಶ ಡೊಂಬರ, ಸಂತೋಷ ಹಜಾರೆ, ಚನ್ನು ಆರೇಗಾರ, ಬಸವರಾಜ ಮುರಾರಿ, ಶಿವಾನಂದ ಹುಣಶ್ಯಾಳ, ಜಿ.ಎಸ್.ಗೊಂಬಿ, ಚಂದ್ರಶೇಖರ ಮೋರೆ, ರಾಘು ಶಿರೋಳ, ವಿಶಾಲ ಪತ್ತಾರ, ಮಹಾಲಿಂಗ ಅವಟಗಿ, ಅನೀಲ ಖವಾಸಿ ಸೇರಿದಂತೆ ಹಲವರು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದ್ದರು.

## ಶಿವಾನುಭವಗೋಷ್ಠಿ ಕಾರ್ಯಕ್ರಮ

# ಅರಿವು ಎಂಬುದು ಸದಾ ನಿರ್ಮಲ: ಶ್ರೀಮಂತ ಮಹಾರಾಜರು




**ಮಹಾಲಿಂಗಪುರ :** ಸುಗಂಧ, ದುರ್ಗಂಧಯುಕ್ತ ಸಕಲ ಪದಾರ್ಥಗಳನ್ನು ವಾಯು ಪ್ರಕಾಶಿಸಿದರೂ ಹೇಗೆ ನಿರ್ಮಲವಾಗಿರುವುದೋ ಅದೇ ರೀತಿ ಅರಿವು ಸಕಲ ಪದಾರ್ಥಗಳನ್ನು ಅರಿತರೂ ಒಂದರೊಡನೆಯು ಬೆರೆಯದೆ ಸದಾ ನಿರ್ಮಲವಾಗಿರುತ್ತದೆ ಎಂದು ಮಾರಾಪುರದ ಶ್ರೀಮಂತ ಮಹಾರಾಜರು ಹೇಳಿದರು.

ಸಮೀಪದ ರನ್ನಬೆಳಗಲಿಯ ಸಿದ್ಧಾರೂಢಮಠದ ಶಂಭುಲಿಂಗಾಶ್ರಮದಲ್ಲಿ ಶಂಭುಲಿಂಗ ಸ್ವಾಮೀಜಿಗಳ ಚಿರಸ್ಮರಣೆ ನಿಮಿತ್ಯ ಹಮ್ಮಿಕೊಂಡ ಪ್ರತಿ ತಿಂಗಳ ಹುಣ್ಣಿಮೆಯ 196ನೇ ಶಿವಾನುಭವಗೋಷ್ಠಿ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಮಧುರಖಂಡಿಯ ಮಲ್ಲಯ್ಯಸ್ವಾಮೀಜಿ ಮಾತನಾಡಿ, ಪ್ರಕೃತಿಗೆ ವಿಕೃತಿ ಸಹಜವಾಗಿದೆ.ಸತ್ವಗುಣದಿಂದ ಅದು ಸಂಸ್ಕೃತಿಯನ್ನು ಪಡೆದರೆ ತಮೋಗುಣದಿಂದ ವಿಕೃತಿ ಹೊಂದಬಹುದು.ಆದರೆ, ಆ ಪ್ರಕೃತಿಯ ಪರಿಣಾಮಗಳನ್ನು ಎದುರಿಟ್ಟು ನೋಡುವ ಅರಿವು ನಿರ್ವಿಕಾರವಾಗಿರುತ್ತದೆ ಎಂದರು.

ಗುಲಗಂಜಿಕೊಪ್ಪದ ಪ್ರಭು ಸ್ವಾಮೀಜಿ, ಅಂತಾಪುರದ ದುಂಡಣ್ಣ ಶರಣರು, ರಾಂಪುರದ ಬಸವರಾಜ ಸ್ವಾಮೀಜಿ, ಚಂದ್ರಶೇಖರ ಮುಂಡಗನೂರ, ಅಕ್ಕಾತಾಯಿ ಕಿಚಡಿ, ಕಾಶೀಬಾಯಿ ಪುರಾಣಿಕ, ಆರ್.ಎಚ್.ಕಂಬಾರ, ಬಸವರಾಜ ಪುರಾಣಿಕ ಸೇರಿದಂತೆ ಹಲವರು ಇದ್ದರು.

# ಪಿಯುಸಿ, ಎಸ್‌ಎಸ್‌ಎಲ್‌ಸಿ ಸಾಧಕರಿಗೆ ಸನ್ಮಾನ

## ವಿದ್ಯಾರ್ಥಿಗಳನ್ನು ಗುರುತಿಸುವಕಾರ್ಯ ಶ್ಲಾಘನೀಯ: ಶಿವಲಿಂಗ ಜುಟನಟ್ಟಿ



**ಮಹಾಲಿಂಗಪುರ :** ಪಟ್ಟಣದ ಗಡಾದಗಲ್ಲಿಯ ರಾಣಿಚನ್ನಮ್ಮ ಸಭಾಭವನದಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜದಿಂದ ಹಮ್ಮಿಕೊಂಡ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ದ್ವಿತೀಯ ವರ್ಷದಲ್ಲಿ ಉತ್ತಮ ಅಂಕ ಪಡೆದ ಸಮಾಜದ 55 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಶಿಕ್ಷಕ ಶಿವಲಿಂಗ ಜುಟನಟ್ಟಿ ಮಾತನಾಡಿ, ಸಮಾಜದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನುಗುರುತಿಸುವಕಾರ್ಯಶ್ಲಾಘನೀಯವಾದುದು. ವಿದ್ಯಾರ್ಥಿಗಳು ತಮ್ಮಜೀವನದಲ್ಲಿ ಬಹು ಎತ್ತರಕ್ಕೆ ಬೆಳೆಯುವ ಕನಸು ಕಾಣುವುದರಜತೆಗೆ ನನಸಾಗಿಸುವ ಕಾರ್ಯ ಮಾಡಬೇಕುಎಂದರು.

ಕೆಎಲ್‌ಇ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕಿ ಸಪ್ನಾ ಅನಿಗೋಳ, ಸಮಾಜದ ಟ್ರಸ್ಟ್ ಅಧ್ಯಕ್ಷ ಡಾ.ಎ.ಆರ್.ಬೆಳಗಲಿ,ವಿಜಯಕುಮಾರ ಕುಳಲಿ ಮಾತನಾಡಿದರು.

ನಗರ ಘಟಕದ ಅಧ್ಯಕ್ಷ ಬಸಪ್ಪಕೊಪ್ಪದ, ಮಹಿಳಾ ಘಟಕದ ಅಧ್ಯಕ್ಷೆ ವಿದ್ಯಾ ದಿನ್ನಿಮನಿ, ಡಾ.ಉಷಾ ಬೆಳಗಲಿ, ಈರಪ್ಪ ದಿನ್ನಿಮನಿ, ಹಣಮಂತ ಶಿರೋಳ, ಚನ್ನಪ್ಪ ಪಟ್ಟಣಶೆಟ್ಟಿ, ಅಶೋಕ ದಿನ್ನಿಮನಿ, ಶ್ರೀಶೈಲಪ್ಪ ಉಳ್ಳಾಗಡ್ಡಿ, ಅಕ್ಕಾತಾಯಿ ಕಿಚಡಿ, ಬಸವರಾಜ ಮೇಟಿ, ಎಸ್.ಎನ್.ಬ್ಯಾಳಿ, ನಾಗಪ್ಪಖೋತ, ಶ್ರೀಶೈಲಪ್ಪ ರೊಡ್ಡನ್ನವರ, ಎಂ.ಎ.ಸವಸುದ್ದಿ ಸೇರಿದಂತೆ ಹಲವರು ಇದ್ದರು.



## ಶ್ರದ್ಧಾಂಜಲಿ

**ಮಹಾಲಿಂಗಪುರ : ಪಟ್ಟಣದ ಚನ್ನಮ್ಮ ವೃತ್ತದಲ್ಲಿ ಶುಕ್ರವಾರ ಸಂಜೆ ರಾಜ್ಯ ನೇಕಾರ ಸೇವಾ ಸಂಘದಿಂದ ರೈತಸಂಘದ ಹೋರಾಟಗಾರ್ತಿ ಜಯಶ್ರೀ ಗುರಣ್ಣವರ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.ಶಿವಲಿಂಗ ಟಿರಕಿ, ಬಂದು ಪಕಾಲಿ, ರಾಜೇಂದ್ರ ಮಿರ್ಜಿ ಸೇರಿದಂತೆ ಹಲವರು ಇದ್ದರು.**

# ರೈತ ಮಕ್ಕಳಿಗೆ ತೋಟಗಾರಿಕೆ ತರಬೇತಿ: ಅರ್ಜಿ ಆಹ್ವಾನ

**ಕೊಪ್ಪಳ :** 2024–25ನೇ ಸಾಲಿಗೆ ಕೊಪ್ಪಳ ಜಿಲ್ಲೆಯ ಆಸಕ್ತ ಅರ್ಹ ರೈತ ಮಕ್ಕಳಿಂದ ಕೊಪ್ಪಳ ತಾಲೂಕಿನ ಮುನಿರಾಬಾದಿನ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 09 ತಿಂಗಳ ತೋಟಗಾರಿಕೆ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2024 ರ ಜೂನ್ 15 ರಿಂದ 2025ರ ಮಾರ್ಚ್ 31 ರವರೆಗೆ 09 ತಿಂಗಳುಗಳ ಕಾಲ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಗಾಗಿ ಸಾಮಾನ್ಯ ಅಭ್ಯರ್ಥಿ–17, ಪರಿಶಿಷ್ಠ ಜಾತಿ–03 ಗಳಂತೆ ಒಟ್ಟು 20 ಅಭ್ಯರ್ಥಿಗಳ ಗುರಿ ನಿಗದಿಪಡಿಸಲಾಗಿದೆ. ಅರ್ಜಿ ಸಲ್ಲಿಸಲು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ಕನಿಷ್ಠ 18 ವರ್ಷ ಗರಿಷ್ಠ 33 ವರ್ಷ, ಇತರರಿಗೆ ಕನಿಷ್ಠ 18 ವರ್ಷ ಗರಿಷ್ಠ 30 ವರ್ಷ ವಯೋಮಿತಿ ನಿಗದಿಪಡಿಸಲಾಗಿದೆ.

ಅಭ್ಯರ್ಥಿಗಳು ಕನ್ನಡ ವಿಷಯಗಳೊಂದಿಗೆ 10ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಚೆನ್ನಾಗಿ ಕನ್ನಡ ಓದುವುದು, ಬರೆಯುವುದು ಮತ್ತು ಮಾತನಾಡುವುದನ್ನು ಬಲ್ಲವರಾಗಿರಬೇಕು. ಈ ತರಬೇತಿಯು ರೈತರ ಮಕ್ಕಳಿಗಾಗಿ ಇರುವುದರಿಂದ ಅಭ್ಯರ್ಥಿಯ ತಂದೆ/ತಾಯಿ ಅಥವಾ ಪೋಷಕರು (ತಂದೆ/ತಾಯಿ ಇಲ್ಲದ ಪಕ್ಷದಲ್ಲಿ) ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವ–ಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಅಭ್ಯರ್ಥಿಗಳು ತೋಟದ ಕೆಲಸಗಳನ್ನು ಮಾಡುವಷ್ಟು ದೃಢಕಾಯರಾಗಿರಬೇಕು.

ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 30, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ರೂ.15 ಅರ್ಜಿ ಶುಲ್ಕವನ್ನು ನಿಗದಿಪಡಿಸಲಾಗಿದ್ದು, ಪೋಸ್ಟಲ್ ಆರ್ಡರ್(ಐಪಿಒ) ಅಥವಾ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಯನ್ನು ತೋಟಗಾರಿಕೆ ಉಪನಿರ್ದೇಶಕರು(ಜಿ.ಪಂ), ಕೊಪ್ಪಳ ರವರ ಹೆಸರಿನಲ್ಲಿ ಪಡೆದು ಅರ್ಜಿ ಜೊತೆಗೆ ಲಗತ್ತಿಸಬೇಕು.

ಈಗಾಗಲೇ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ ಹೊಸದಾಗಿ ಅರ್ಜಿ ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಗಳು ಮೇ 23 ರಿಂದ ಜೂನ್ 03 ರವರೆಗೆ ತೋಟಗಾರಿಕೆ ಉಪನಿರ್ದೇಶಕರು(ಜಿ.ಪಂ), ಕೊಪ್ಪಳ, ಸಹಾಯಕ ತೋಟಗಾರಿಕೆ ನಿರ್ದೇಕರು (ರಾ.ವ) ಕೊಪ್ಪಳ ರವರ ಕಛೇರಿಯಲ್ಲಿ ಪಡೆಯಬಹುದು ಅಥವಾ ಇಲಾಖಾ ವೆಬ್‌ಸೈಟ್ www.horticulture.kar.nic.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿಗದಿತ ಅರ್ಜಿಗಳನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಜೂನ್ 03 ರ ಸಂಜೆ 05.30 ಗಂಟೆಯೊಳಗಾಗಿ ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ)ಕೊಪ್ಪಳ ಅಥವಾ ಸಹಾಯಕ ತೋಟಗಾರಿಕೆ ನಿರ್ದೇಕರು (ರಾವ) ಕೊಪ್ಪಳ ರವರ ಕಛೇರಿಗೆ ಸಲ್ಲಿಸಬೇಕು.

ಜೂನ್ 06 ರಂದು ಬೆಳಿಗ್ಗೆ 10 ಗಂಟೆ–ಗೆ ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ) ಕೊಪ್ಪಳ ಕಛೇರಿಯಲ್ಲಿ ಸಂದರ್ಶನಕ್ಕೆ ಎಲ್ಲಾ ಮೂಲ ದಾಖಾಲಾತಿಗಳೊಂದಿಗೆ ಹಾಜರಾಗಬೇಕು. ಇದಕ್ಕಾಗಿ ಪ್ರತ್ಯೇಕ ಸಂದರ್ಶನ ಪತ್ರವನ್ನು ಕಳುಹಿಸಲಾಗುವುದಿಲ್ಲ ಎಂದು ತೋಟಗಾರಿಕೆ ಉಪನಿರ್ದೇಶಕರಾದ ಕೃಷ್ಣ ಉಕ್ಕುಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶರೀರಚಿಂತನ ಸಮಾರೋಪ ಸಮಾರಂಭ–2024

# ಉದ್ಯಮಕ್ಕಿಂತ ಶಿಕ್ಷಣ ಕ್ಷೇತ್ರ ವಿಭಿನ್ನ: ಸಂಗಮೇಶ್ ನಿರಾಣಿ

**ಬಾಗಲಕೋಟೆ :** ಉದ್ಯಮದಿಂದ ಶಿಕ್ಷಣ ಕ್ಷೇತ್ರ ಶ್ರೀಮಂತಗೊಳ್ಳುವುದಕ್ಕಿಂತ ಸೂಕ್ತ ಶಿಕ್ಷಣದಿಂದ ಉದ್ಯಮ ಕ್ಷೇತ್ರ ಶ್ರೀಮಂತ ಗೊಳ್ಳುತ್ತದೆ. ಹೀಗಾಗಿ ಉದ್ಯಮಕಿಂತ ಶಿಕ್ಷಣ ಕ್ಷೇತ್ರ ವಿಭಿನ್ನ ಎಂದು ಸಂಗಮೇಶ್ ನಿರಾಣಿ ಅಭಿಪ್ರಾಯ ಪಟ್ಟರು.




ನಗರದ ಎಂ ಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ನಡೆದ ಶರೀರ ಚಿಂತನ– 2024 ರ ರಾಷ್ಟ್ರಮಟ್ಟದ ಕಾರ್ಯಾಗಾರದಲ್ಲಿ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು ಉದ್ಯಮದಿಂದ ಶಿಕ್ಷಣ ಶ್ರೀಮಂತವಾಗುವುದಕ್ಕಿಂತ ಶಿಕ್ಷಣದಿಂದ ಉದ್ಯಮ ಶ್ರೀಮಂತ ಗೊಳ್ಳುತ್ತದೆ. ಹೀಗಾಗಿ ಇಂತಹ ವಿಭಿನ್ನ ಶೈಕ್ಷಣಿಕ ಕ್ಷೇತ್ರಗಳ ಚಟುವಟಿಕೆಗಳು ಎಲ್ಲರಿಗೂ ಮಾದರಿಯಾಗಲಿ ಎಂದರು.

ಅತಿಥಿಯಾಗಿ ಭಾಗವಹಿಸಿದ್ದ ರಾಜ್ಯಸಭಾ ಸದಸ್ಯರಾದ ಶ್ರೀ ನಾರಾಯಣಸಾ ಬಾಂಡಗೆ ಮಾತನಾಡುತ್ತಾ ಇಂತಹ ರಾಷ್ಟ್ರಮಟ್ಟದ ಕಾರ್ಯಾಗಾರವನ್ನು ಯಶಸ್ವಿಯಾಗಿ ನಿಭಾಯಿಸಿದ ಸಂಸ್ಥೆಯ ಕಾರ್ಯ ಶ್ರೇಷ್ಠ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ಗಣೇಶ್ ಪುತ್ತೂರ ಮಾತನಾಡುತ್ತಾ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಇಂತಹ ಪ್ರಯತ್ನಗಳು ಹೆಚ್ಚಾದಂತೆ ವೈದ್ಯಕೀಯ ವಿದ್ಯಾರ್ಥಿಗಳ ಮಾನಸಿಕ ಸಾಮರ್ಥ್ಯ ಹೆಚ್ಚುವುದಲ್ಲದೆ ಹೊಸ ಸಂಶೋಧನೆಗಳಿಗೆ ಸಹಕಾರಿಯಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಟಿ ಐ ಟಿ ಐ ನ ಅಧ್ಯಕ್ಷರಾದ ಮಾಧುರಿ ಮುಧೋಳ ಮಾತನಾಡಿ ಈ ಕಾರ್ಯಾಗಾರದಲ್ಲಿ ಪಾಲ್ಗೊಂಡ ತಮ್ಮೆಲ್ಲರಿಗೂ ಶುಭವಾಗಲಿ ಹಾಗೂ ಈ ಕಾರ್ಯ ತಮಗೆ ಯಶಸ್ಸನ್ನು ತಂದು ಕೊಡಲಿ ಎಂದು ಆಶಿಸಿದರು.

ಕೊನೆಯ ದಿನದ ಉಪನ್ಯಾಸದಲ್ಲಿ ಡಾ. ಉಮಾ ಗೋಪಾಲ್, ಡಾ.ತುಕಾರಾಮ್ ರಾಥೋಡ್, ಡಾ. ಗುರುಬಸವರಾಜ, ಡಾ. ಶಿವಪ್ರಸಾದ್ ಸಿ ಇವರುಗಳು ವಿವಿಧ ವಿಷಯಗಳ ಮೇಲೆ ವಿಷಯ ಮಂಡಿಸಿದರು. ಕಾರ್ಯಕ್ರಮದಲ್ಲಿ ಡಾ.ಮಹಾಂತೇಶ್ ರಾಮಣ್ಣವರ್ ಇವರಿಗೆ ಸಂಸ್ಥೆಯ ಪರವಾಗಿ ಶರೀರ ರತ್ನ – 2024 ರ ಪ್ರಶಸ್ತಿಯನ್ನು ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರಹಲ್ಲಾದ್ ಗಂಗಾವತಿ, ಕಾಲೇಜಿನ ಡೀನ್/ಆಡಳಿತಾಧಿಕಾರಿಯಾದ ಡಾ. ಶಿವಕುಮಾರ್ ಗಂಗಾಲ್, ಶರೀರ ಕ್ರೀಯಾ ವಿಭಾಗದ ಡಾ. ದೀಪಾ ಗಂಗಾಲ,

ಶರೀರ ರಚನಾ ವಿಭಾಗದ ಡಾ.ರಜನಿ ದಡೆದ, ಸಂಸ್ಥೆಯ ಎಲ್ಲ ಪ್ರಾಧ್ಯಾಪಕ ವರ್ಗ ಹಾಗೂ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಶಿಕ್ಷಕರು ಪಾಲ್ಗೊಂಡಿದ್ದರು.

# ಬನಹಟ್ಟಿಯಲ್ಲಿ ಬುದ್ಧ ಜಯಂತಿ ಆಚರಣೆ



**ಬನಹಟ್ಟಿ :** ಬುದ್ಧ ಪೂರ್ಣಿಮೆಯ ನಿಮಿತ್ಯ ಇಲ್ಲಿಯ ಸಿದ್ಧಾರೂಢ ಮಠದಲ್ಲಿ ಬುದ್ಧನ ಭಾವಚಿತ್ರಕ್ಕೆ ಪೂಜೆ ಮಾಡುವ ಮೂಲಕ ಬುದ್ಧ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಪ್ರಕಾಶ ಜಿಡ್ಡಿಮನಿ ಮಾತನಾಡಿ, ಜಗತ್ತಿನಲ್ಲಿ ಅತಿ ವಿಶಿಷ್ಠ ಮಹಾಪುರುಷ ಭಗವಾನ್ ಬುದ್ಧರ ಜೀವನದಲ್ಲಿ ಹುಟ್ಟು, ಜ್ಞಾನೋದಯ ಹಾಗೂ ಮಹಾಪರಿನಿರ್ವಾಣ ಈ ಮೂರು ಐತಿಹಾಸಿಕ ಘಟನೆಗಳು ಸಂಭವಿಸಿವೆ ಎಂದರು.

ಸಂಜಯ ಬಿದರಿ ಮಾತನಾಡಿ, ಬುದ್ಧ ಪೂರ್ಣಿಮೆಯ ಬೆಳಕು ಜಗತ್ತಿನ ಅಜ್ಞಾನದ ಅಂಧ:ಕಾರವನ್ನು ಅಳಿಸಿ ಸುಜ್ಞಾನದ ದೀವಿಗೆಯನ್ನು ಬೆಳಗಲಿ. ಎಲ್ಲರೂ ಬುದ್ಧನ ಆದರ್ಶಗಳನ್ನು ಪಾಲಿಸಲು ತಿಳಿಸಿದರು. ಸುನೀಲ ಬಾಣಕಾರ, ಹುಲಜತ್ತಿ, ಸುಟ್ಟಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕಾನೂನು ಪರಿಪಾಲನೆ & ಸಂಚಾರಿ ನಿಯಮಗಳ ತಿಳವಳಿಕೆ ಅಗತ್ಯ: ಪಿಎಸ್‌ಐ ಚಂದ್ರಶೇಖರ ಹೆರಕಲ್

**ಮೂಡಲಗಿ :** ವಿದ್ಯಾರ್ಥಿಗಳು ಅಧ್ಯಯನದ ಜೊತೆಗೆ ಕಾನೂನು ಪರಿಪಾಲನೆಯಲ್ಲಿ ತೊಡಗುವುದು ಅವಶ್ಯವಿದೆ. ಇಂದು ಕಾನೂನು ಮಾನದಂಡಗಳು ಸರಿಯಾಗಿ ಅರಿವು ಇಲ್ಲದೇ ಅಪರಾದಗಳು ಹೆಚ್ಚಾಗುತ್ತಿದ್ದು. ಅಂತಹ ಅಪರಾಧಗಳಲ್ಲಿ ರಸ್ತೆ ಅಪಘಾತ ಸಹಿತ ಸೇರಿದೆ ವಾಹನ ಸಂಚಾರಿ ನಿಯಮಗಳ ಜೊತೆಗೆ ವಾಹನ ಚಲಾವಣೆ ಲೈಸನ್ಸ್, ಹೆಲ್ಮೆಟ್,ಇನ್ಸೂರನ್ಸ್, ಪಾಸಿಂಗ್ ಇಲ್ಲದೇ ವಾಹನ ಚಲಿಸಿ ಅಪಘಾತ ಉಂಟಾದರೆ ಕಾನೂನುನಲ್ಲಿ ಅಪರಾದವಾಗುತ್ತದೆ. ಕಾನೂನು ನಿಯಮಗಳಂತೆ ವಾಹನ ಚಲಿಸಿ ತಂದೆ ತಾಯಿಗಳು ನೀಡಿದ ಜೀವವನ್ನು ರಕ್ಷಣೆ ಮಾಡಿಕೊಳ್ಳುವದರ ಜೊತೆಗೆ ಮತ್ತೊಬ್ಬರ ಜೀವವನ್ನು ರಕ್ಷಿಸಿದಂತಾಗುತ್ತದೆ ಎಂದು ಮೂಡಲಗಿಯ ಪೋಲಿಸ್ ಠಾಣೆಯ ಪಿಎಸ್‌ಐ ಚಂದ್ರಶೇಖರ ಹೆರಕಲ್ ಹೇಳಿದರು.




ಅವರು ಶನಿವಾರ ಆರ್.ಡಿ.ಎಸ್.ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಮೂಡಲಗಿ ಪೊಲೀಸ್ ಠಾಣಿ ವತಿಯಿಂದ ಆಯೋಜಿಸಿದ ಸಂಚಾರಿ ನಿಯಮಗಳ ಅರಿವು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿ ಪೊಲೀಸ ಇಲಾಖೆಯಲ್ಲಿ ಕಾರ್ಯನಿರ್ವಹಿಸವವರಿಗೆ ಮಾನವೀಯತೆ ಇರುವುದಿಲ್ಲ ಎಂಬ ಸಂದೇಹ ಭಾವನೆ ಬೇಡ ನೀವು ಕಾನೂನು ಗೌರವಿಸಿ ನಮ್ಮ ಪ್ರೀತಿಯನ್ನು ಗಳಿಸಿ ಅದರ ಜೊತೆಗೆ ಸೈಬರ್ ಕ್ರೈಮ್ ಬಗ್ಗೆ ಎಚ್ಚರಿಕೆ ವಹಿಸಿ ಆನ್ ಲೈನ್ ಪೇಮೆಂಟ್ ಮಾಡುವಾಗ ಬೇರೆವರಿಗೆ ಓಟಿಪಿ ನೀಡುವದರಲ್ಲಿ ಎಚ್ಚರವಹಿಸಬೇಕೆಂದರು.

ಕಾರ್ಯಕ್ರಮದ ಮೂಡಲಗಿ ಪೋಲಿಸ ಠಾಣೆಯ ಸಿಬ್ಬಂದಿ ಎನ್.ಎಸ್. ಒಡೆಯರ ಮಾತನಾಡಿ ವಿದ್ಯಾರ್ಥಿಗಳು ಮುಂದಿನ ನಾಡಿನ ಪ್ರಜೆಗಳಾಗಿರುವದರಿಂದ ಸಮಾಜ ರಕ್ಷಣೆ ಮತ್ತು ಕಾನೂನು ಪರಿಪಾಲನೆಯಲ್ಲಿ ಮಹತ್ವದಪಾತ್ರ ನಿರ್ವಹಿಸಬೇಕಾಗಿದ್ದು.

ಸರಿಯಾದ ಕಾನೂನು ತಿಳಿವಳಿಕೆ ಪಡೆದುಕೊಳ್ಳಿ. ಪೋಲಿಸ ಇಲಾಖೆ ಸಾರ್ವಜನಿಕರ ರಕ್ಷಣೆಗೆ ವಿಶೇಷ ಗಮನ ನೀಡುತ್ತಿದೆ, ಅಪರಾಧ ತಡೆಗಟ್ಟುವಲ್ಲಿ ತಮ್ಮಲ್ಲರ ಸಹಕಾರ ಅಗತ್ಯ ಯಾವುದೇ ವೇಳೆಯಲ್ಲಿ ನಾವು ನಿಮ್ಮ ಸೇವೆಗೆ ಸದಾಸಿದ್ದರಿರುತ್ತೇವೆ. ವಿದ್ಯಾರ್ಥಿಗಳು ಅಪರಾಧಗಳು ಆಗದಂತೆ ಮುನ್ನೆಚ್ಚರಿಕೆ ವಹಿಸುವುದು ಅವಶ್ಯವಿದೆ ಮತ್ತು ಅಪರಾಧಗಳು ನಡೆಯುತ್ತಿದ್ದರೆ ಗೌಪ್ಯವಾಗಿ ಮಾಹಿತಿ ನೀಡಲು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಶಿವಾನಂದ ಸತ್ತಿಗೇರಿ ಉಪನ್ಯಾಸಕರಾದ, ಸಂತೋಷ ಲಟ್ಟಿ, ವಾಣಿಶ್ರೀ ಕಾಪಶೆ ಮತ್ತಿತರರು ಹಾಜರಿದ್ದರು.

# ತಾಯಿ ಮತ್ತು ಮಗು ಕಾಣೆ: ಪತ್ತೆಗೆ ಸಹಕರಿಸಲು ಮನವಿ

**ಕೊಪ್ಪಳ :** ಕುಷ್ಟಗಿ ತಾಲ್ಲೂಕಿನ ಟೆಂಗುಂಟಿ ಗ್ರಾಮದ ಮುದಕವ್ವ ಗಂಡ ಶರಣಪ್ಪ ಮಾದರ ಎಂಬ ಮಹಿಳೆಯು ತನ್ನ 2 ವರ್ಷದ ಮಗು ಗಗನ್‌ನೊಂದಿಗೆ ಮೇ 16 ರ ರಾತ್ರಿಯಿಂದ ಕಾಣೆಯಾಗಿದ್ದು, ಈವರೆಗೂ ಪತ್ತೆಯಾಗಿರುವುದಿಲ್ಲ. ಈ ಬಗ್ಗೆ ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 74/2024 ರ ಕಲಂ ಮಹಿಳೆ ಮತ್ತು ಮಕ್ಕಳು ಕಾಣೆ ಅಡಿ ಪ್ರಕರಣ ದಾಖಲಿಸಲಾಗಿದೆ.





**ಮಹಿಳೆಯ ಚಹರೆ ವಿವರ :**

ಮಹಿಳೆಯು 23 ವರ್ಷದವರಾಗಿದ್ದು, 4.6 ಅಡಿ ಎತ್ತರ, ಗೋಧಿ ಮೈಬಣ್ಣ, ಕೋಲು ಮುಖ, ತೆಳ್ಳನೆಯ ಮೈಕಟ್ಟು ಹೊಂದಿದ್ದಾರೆ. ಕಾಣೆಯಾದಾಗ ಹಸಿರು ಬಣ್ಣದ ಸೀರೆ, ಕಪ್ಪು ಬಣ್ಣದ ರವಿಕೆ ಧರಿಸಿದ್ದರು. ಕನ್ನಡ ಭಾಷೆ ಮಾತನಾಡುತ್ತಾರೆ.

**ಮಗುವಿನ ಚಹರೆ ವಿವರ :**

ಗಗನ್ ತಂದೆ ಶರಣಪ್ಪ ಮಾದರ ಎಂಬ ಮಗು 2 ವರ್ಷದವನಾಗಿದ್ದು, 2.8 ಅಡಿ ಎತ್ತರ, ಕೋಲು ಮುಖ, ತೆಳ್ಳನೆಯ ಮೈಕಟ್ಟು, ಸಾದಗೆಂಪು ಮೈಬಣ್ಣ ಹೊಂದಿದ್ದಾನೆ.

ಕಾಣೆಯಾದಾಗ ನೀಲಿ ಬಣ್ಣದ ಟೀ ಶರ್ಟ್ ಧರಿಸಿದ್ದನು. ಮೇಲ್ಕಂಡ ಚಹರೆಯ ಮಹಿಳೆ ಹಾಗೂ ಮಗುವಿನ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರು : 08539–230111, ಡಿಎಸ್‌ಪಿ ಗಂಗಾವತಿ : 9480803721, ಸಿಪಿಐ ಕುಷ್ಟಗಿ : 9480803732, ಕುಷ್ಟಗಿ ಪೊಲೀಸ್ ಠಾಣೆ ಪಿಎಸ್‌ಐ : 9480803757, 9972389341 ಗೆ ಸಂಪರ್ಕಿಸಿ ಮಾಹಿತಿ ನೀಡಬೇಕು ಎಂದು ಕುಷ್ಟಗಿ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State